CC-O. In Public Domain. Digitized By eGangotri

ಭಗವದ್ಗೀತೆ

ಕನ್ನಡ ಅನುವಾದ ಸಹಿತ

ಪ್ರಕಾಶಕರು
ಶ್ರೀ ರಾಮಕೃಷ್ಣ ಆಶ್ರಮ
ಮೈಸೂರು 570 020

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-0. In Public Domain. Digitized by eGangotri

ಶ್ರೀಮದ್ಭಗವದ್ಗೀತೆ

ಕನ್ನಡ ಅನುವಾದ ಸಹಿತ

ಪ್ರಕಾಶಕರು

ಶ್ರೀ ರಾಮಕೃಷ್ಣ ಆಶ್ರಮ

ಮೈಸೂರು 570 020

Sri Vidyabharathi Book Centre, Sringeri

ಪ್ರಥಮ ಮುದ್ರಣ 1987
2000 ಪ್ರತಿಗಳು
CC-O. In Public Domain. Digitized by eGangotri

ಎಲ್ಲ ಹಕ್ಕುಗಳನ್ನು ಕಾದಿರಿಸಲಾಗಿದೆ

ಬೆಲೆ ರೂ. 5-00

ಮುದ್ರಕರು :

ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್
ಜಯನಗರ, ಮೈಸೂರು 570 014

Sri Vidyabharathi Book Centre, Sringeri

CC-O. In Public Domain. Digitized by eGangotri

ಅವತರಣಿಕೆ

ದೃಗ್‌ದೃಶ್ಯವಿವೇಕವು ಅದ್ವೈತ ವೇದಾಂತಕ್ಕೆ ಸೇರಿದ ಒಂದು ಪ್ರಕರಣ ಗ್ರಂಥ, ಎಂದರೆ, ಶಾಸ್ತ್ರದ ಒಂದು ಅಂಶ ಅಥವಾ ಭಾಗವನ್ನು ಸ್ಪಷ್ಟಪಡಿಸುವ ಗ್ರಂಥ. ಇದು ಅದ್ವೈತವನ್ನು ಸಾಧಿಸುವ ವಾದಗ್ರಂಥವಲ್ಲ. ಆ ಸಿದ್ಧಾಂತವನ್ನು ಒಪ್ಪಿಕೊಂಡಿರುವವರಿಗೆ ಅದರ ಒಂದು ಅಂಶದ ವಿಚಾರದಿಂದ ಆ ಅಂಶವನ್ನು ಸ್ಪಷ್ಟಪಡಿಸಿ ಅವರ ಒಪ್ಪಿಗೆಯನ್ನು ದೃಢಪಡಿಸಿ ಸಾಧನದ ದಾರಿಯನ್ನು ಹೇಳುವುದು ಇದರ ಉದ್ದಿಶ್ಯ. ಇದಕ್ಕೆ ವಾಕ್ಯಸುಧಾ ಎಂಬ ಮತ್ತೊಂದು ಹೆಸರೂ ಇದೆ. ಇದರ ಕರ್ತೃ ಯಾರು ಎಂಬುದು ವಿವಾದಾಸ್ಪದ. ಶ್ರೀಮತ್ ಶಂಕರರೇ ಬರೆದವರು ಎಂಬ ಮತವೊಂದು; ಭಾರತೀ ತೀರ್ಥ ವಿದ್ಯಾರಣ್ಯರು ಬರೆದದ್ದು ಎಂಬುದು ಮತ್ತೊಂದು ಮತ. ಇದು ಇತ್ಯರ್ಥವಾಗಿಲ್ಲ.

ಈ ಸಣ್ಣ ನಲವತ್ತಾರು ಶ್ಲೋಕದ ಪ್ರಕರಣ ಗ್ರಂಥಕ್ಕೆ ಎಂಟು ವ್ಯಾಖ್ಯಾನಗಳಿವೆಯೆಂದು ತಿಳಿದುಬರುತ್ತದೆ. ಇವುಗಳಲ್ಲಿ ಎರಡು ಅಚ್ಚಾಗಿವೆ. ಮೈಸೂರಿನ ಪ್ರಾಚ್ಯಪುಸ್ತಕ ಭಂಡಾರ (Oriental Library) ದಲ್ಲಿ ಇವೆರಡೂ ಇವೆ. ಇವುಗಳಲ್ಲಿ ಒಂದನ್ನು ಬಹಳ ಮಟ್ಟಿಗೆ ಅನುಸರಿಸಿ ಈ ಅನುವಾದವನ್ನು ಮಾಡಿದೆ. ಈ ವ್ಯಾಖ್ಯಾನದ ಕರ್ತೃಗಳು ಯಾರೆಂಬುದೂ ವಿವಾದಾಸ್ಪದವೇ. ಅದರ ನಿರ್ಣಯವನ್ನೂ ಸಂಶೋಧಕರಿಗೆ ಬಿಟ್ಟು ಗ್ರಂಥದ ವಸ್ತುವಿನ ವಿಚಾರ ಮಾಡೋಣ. ಈ ಗ್ರಂಥವನ್ನು ಶ್ರೀಮತ್ ಸ್ವಾಮಿ ನಿಖಿಲಾನಂದಜೀಯವರು ಇಂಗ್ಲೀಷಿನಲ್ಲಿ ಅನುವಾದ ಮಾಡಿದ್ದಾರೆ. ಅದು ಈ ಆಶ್ರಮದಿಂದ ಹಿಂದೆಯೇ ಪ್ರಚಾರವಾಗಿದೆ. ಅದರ ಕನ್ನಡ ಅನುವಾದ ಇದು.

ವ್ಯವಹಾರವೆಲ್ಲವೂ ಭೇದಗ್ರಹಣಪೂರ್ವಕವಾಗಿಯೇ ನಡೆಯುತ್ತಿದೆ. ಈ ಎಲ್ಲ ಭೇದಕ್ಕೂ ಮೂಲಭೂತವಾದದ್ದು ವಿಷಯಿ (subject) ವಿಷಯ (object) ಭೇದ, ದ್ರಷ್ಟೃ ದೃಶ್ಯ ಭೇದ. ದ್ರಷ್ಟೃವೆಂದಾಗ ದರ್ಶನಕರ್ಮಕರ್ತೃ ಎಂದು ಮನಸ್ಸಿಗೆ ಬರಬಹುದೆಂದು ಅದನ್ನು ತಪ್ಪಿಸುವುದಕ್ಕಾಗಿ ವಿಷಯಿಯನ್ನು ದೃಕ್ ಎಂದು ಕರೆದು, ಈ ದೃಕ್ ದೃಶ್ಯಗಳ ವಿಚಾರ ಇಲ್ಲಿ ನಡೆದಿದೆ. ವ್ಯವಹಾರದಲ್ಲಿ ಚೈತನ್ಯವುಳ್ಳ ದ್ರಷ್ಟೃಗಳೆಲ್ಲಾ ಮತ್ತೊಂದು ದ್ರಷ್ಟೃವಿಗೆ ದೃಶ್ಯಗಳಾಗಿದ್ದಾರೆ ಎಂಬುದು ಅನುಭವದಲ್ಲಿ ತಿಳಿದ ವಿಷಯ. ಹೀಗಾಗಿ ವಿಷಯಿ ವಿಷಯಗಳ ವ್ಯವಸ್ಥೆ ತಪ್ಪಿರುವಂತೆ ಕಾಣುತ್ತದೆ. ಆದರೂ ಇದು ಅವ್ಯವಸ್ಥಿತವಲ್ಲವೆಂಬ

CC-O. In Public Domain. Digitized by eGangotri
ಭಾವನೆಯೂ ಇದ್ದೇ ಇರುತ್ತದೆ. ಆದರಿಂದಾಗಿ ದೃಶ್ಯವಲ್ಲದ ದೃಕ್ಕನ್ನು ಒಪ್ಪಿ ಕೊಳ್ಳುವುದು ತಪ್ಪುವುದಿಲ್ಲ. ಇದಕ್ಕೆ ಶ್ರುತಿಯ ಪ್ರಮಾಣವೂ ಇದೆ. ಆದ್ದರಿಂದ ದೃಶ್ಯವಲ್ಲದ ದೃಗ್ರೂಪವಾದ ಸಾಕ್ಷಿಯನ್ನು ಒಪ್ಪಲೇಬೇಕಾಗುವುದು. ಹೀಗೆ ಪ್ರಾರಂಭವಾದ ಗ್ರಂಥದ ಮೊದಲ ಐದು ಶ್ಲೋಕಗಳಲ್ಲಿ ಸಾಕ್ಷಿಯ ಸ್ವರೂಪದ ವಿಚಾರ ನಡೆದಿದೆ.

ಈ ಸಾಕ್ಷಿಯು ಬ್ರಹ್ಮಸ್ವರೂಪವಾಗಿ ಯಾವುದಕ್ಕೂ ಸಂಬಂಧವಿಲ್ಲದೆ ಇರುವುದರಿಂದ ಇದಕ್ಕೂ ವ್ಯವಹಾರಕ್ಕೂ ಸಂಬಂಧವನ್ನು ಹೇಳುವುದಕ್ಕೆ ಚಿದಾಭಾಸವನ್ನು ಕಲ್ಪಿಸಿದೆ; ಆದರ ವಿಚಾರವು ಮುಂದಿನ ನಾಲ್ಕು ಶ್ಲೋಕಗಳಲ್ಲಿ ನಡೆದಿದೆ. ಅಲ್ಲಿಂದ ಮುಂದಕ್ಕೆ ಅವಸ್ಥಾತ್ರಯದ ವಿಚಾರವನ್ನು ಸಂಗ್ರಹವಾಗಿ ಎರಡು ಶ್ಲೋಕದಲ್ಲಿ ಹೇಳಿ, ಮುಂದೆ ಲಿಂಗದೇಹದ ಪ್ರಸ್ತಾಪವನ್ನು ಮಾಡಿ ಅದಕ್ಕೆ ಕಾರಣವಾದ ಮಾಯೆಯ ವಿಚಾರವು ಅದರ ವೃತ್ತಿಗಳ ಮೂಲಕ ಹತ್ತೊಂಬತ್ತನೆಯ ಶ್ಲೋಕದವರೆಗೆ ನಡೆದಿದೆ.

ಇಪ್ಪತ್ತು ಇಪ್ಪತ್ತೊಂದನೆಯ ಶ್ಲೋಕಗಳಲ್ಲಿ ಅತಿ ಮುಖ್ಯವಾದ ಒಂದು ವಿಷಯವನ್ನು ಹೇಳಿದೆ; ವ್ಯವಹಾರದಲ್ಲಿ ಇರುವ ಪ್ರತಿಯೊಂದು ಪದಾರ್ಥದಲ್ಲಿಯೂ ಸತ್, ಚಿತ್, ಆನಂದ, ರೂಪ ಮತ್ತು ನಾಮ, ಎಂಬ ಐದು ಅಂಶ ತೋರುತ್ತವೆ; ಮೊದಲನೆಯ ಮೂರು ಬ್ರಹ್ಮಸ್ವರೂಪವಾಗಿವೆ, ಕೊನೆಯ ಎರಡು ಜಗದ್ರೂಪವಾಗಿವೆ. ಬ್ರಹ್ಮಸ್ವರೂಪವಾದ ಸಚ್ಚಿದಾನಂದ ವಸ್ತುವು ಎಲ್ಲೆಲ್ಲಿಯೂ, ಯಾವಾಗಲೂ ಒಂದೇ ಬಗೆಯಾಗಿ, ಏಕರೂಪವಾಗಿ, ಯಾವ ಮಾರ್ಪಾಡಿಗೂ ಒಳಗಾಗದೆಯೇ ಇರುತ್ತದೆ; ಜಗದ್ರೂಪವಾದ ನಾಮರೂಪಗಳೇ ಭಿನ್ನವಾಗಿಯೂ ಬದಲಾಯಿಸುತ್ತಲೂ ಇರುವುವು.

ಹೀಗೆ ವಿಂಗಡಿಸಿ ತಿಳಿದ ಸತ್ ಅಸತ್, ಚೈತನ್ಯ ಜಡ, ಸತ್ಯ ಅನೃತ, ನಿತ್ಯ ಅನಿತ್ಯ, ಎಂಬ ಪರಸ್ಪರ ವಿರುದ್ಧಾಂಶಗಳನ್ನು ವಿವೇಕದಿಂದ ಅರಿತು, ಅಸತ್, ಜಡ, ಅನೃತ, ಅನಿತ್ಯ ವಾಚ್ಯವಾದ ಜಗದಂಶವನ್ನು ಉಪೇಕ್ಷಿಸಿ, ಸತ್ಯ, ಸತ್, ಚೈತನ್ಯ, ನಿತ್ಯವಾದ ಬ್ರಹ್ಮದಲ್ಲಿಯೇ ಮನಸ್ಸನ್ನು ನಿಲ್ಲಿಸುವುದು ಎಂಬ ಸಮಾಧಿಯ ಅಭ್ಯಾಸವಾದ ನಿದಿಧ್ಯಾಸವನ್ನು ಇಪ್ಪತ್ತೆರಡರಿಂದ ಇಪ್ಪತ್ತೊಂಬತ್ತರವರೆಗಿನ ಎಂಟು ಶ್ಲೋಕಗಳಲ್ಲಿ ಹೇಳಿದೆ.

ಅಲ್ಲಿಂದ ಮುಂದೆ ಮೂವತ್ತನೆಯ ಶ್ಲೋಕದಲ್ಲಿ ಈ ಸಾಧನೆಯಿಂದ ಆಗುವ ಫಲವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ದೇಹಾಭಿಮಾನೇ ಗಲಿತೇ ವಿಜ್ಞಾತೇ ಪರಮಾತ್ಮನಿ
ಯತ್ರ ಯತ್ರ ಮನೋ ಯಾತಿ ತತ್ರ ತತ್ರ ಸಮಾಧಯಃ ॥

ಎಂದು ವಿವರಿಸಿದೆ; ಸ್ಥೂಲ ಸೂಕ್ಷ್ಮ ಕಾರಣ ದೇಹಗಳಲ್ಲಿ ಇದು ನಾನು ಎಂದು ಕೊಂಡಿದ್ದ ತಪ್ಪು ತಿಳಿವಳಿಕೆಯು ಹೋಗಿ ಇದು ಯಾವುದೂ ಅಲ್ಲದ ಪರತತ್ವವೇ ನಾನು ಎಂಬುದು ಅನುಭವವಾದ ಮೇಲೆ ಮನಸ್ಸು ಎಲ್ಲೆಲ್ಲಿ ಹೋದರೂ ಅಲ್ಲಿ ಆ ಪರತತ್ವವನ್ನೇ ಅರಿಯುತ್ತದೆ; ಅದರಲ್ಲಿಯೇ, ಸಮಾಧಿಯಲ್ಲಿಯೇ, ಇರುತ್ತದೆ. ಇದೇ ಮುಕ್ತಿ. ಅನುಭವಸಿದ್ಧವಾದ ಈ ಮಾತನ್ನು ದೃಢಪಡಿಸುವುದಕ್ಕೆ ಮುಂದಿನ ಶ್ಲೋಕದಲ್ಲಿ ಮುಂಡಕ ಶ್ರುತಿಯ ವಾಕ್ಯವನ್ನೂ (II, 2, 9) ಉದ್ಧರಿಸಿದೆ.

ಅಲ್ಲಿಂದ ಮುಂದಕ್ಕೆ ಜೀವ ಮೂರು ಬಗೆಯದು ಎಂಬ ಕಲ್ಪನೆಯನ್ನು ಹೇಳಿದೆ. ಇದು ಇರುವಿಕೆಯು ಮೂರು ಬಗೆಯದು ಎಂಬ ಸತ್ತಾ ತ್ರೈವಿಧ್ಯದ ಕಲ್ಪನೆಯನ್ನು ಅನುಸರಿಸಿದೆ. ಇದನ್ನನುಸರಿಸಿಯೇ ಈ ಮೂರು ಬಗೆಯ ಜೀವಕ್ಕೂ ದೃಶ್ಯವಾದ ಜಗತ್ತೂ ಮೂರು ಬಗೆಯದು; ಅದರಲ್ಲಿ ಪ್ರತಿಯೊಂದು ಬಗೆಯ ಜೀವಕ್ಕೂ ದೃಶ್ಯವಾದ ಕಮ್ಮಿಯ ಮಟ್ಟದ ಇರುವಿಕೆಯುಳ್ಳ, ನ್ಯೂನ ಸತ್ತಾಕವಾದ, ಜಗತ್ತು ಮಿಥ್ಯೆಯಾಗಿಯೂ, ಸಮಸತ್ತಾಕವಾದ, ಸಮಾನವಾದ ಇರುವಿಕೆಯುಳ್ಳ ಜಗತ್ತು ಸತ್ಯವಾಗಿಯೂ ಕಾಣುತ್ತವೆ; ಹೆಚ್ಚಿನ ಮಟ್ಟದ ಇರುವಿಕೆಯುಳ್ಳ, ಅಧಿಕಸತ್ತಾಕವಾದ ಜಗತ್ತು ಕಾಣುವುದೇ ಇಲ್ಲ ಎಂಬುದನ್ನು ವಿವರಿಸಿದೆ. ದೃಶ್ಯವಾದ ಮೂರು ಬಗೆಯ ಜಗತ್ತುಗಳಲ್ಲಿ ಅತ್ಯಂತ ನ್ಯೂನ ಸತ್ತಾಕವಾದ ಪ್ರಾತಿಭಾಸಿಕ ಸತ್ತೆಯುಳ್ಳ ಜಗತ್ತು ತನಗಿಂತಲೂ ಅಧಿಕ ಸತ್ತಾಕವಾದ ವ್ಯಾವಹಾರಿಕ ಜಗತ್ತಿನಲ್ಲಿಯೂ, ಅದು ತನಗಿಂತಲೂ ಅಧಿಕ ಸತ್ತಾಕವಾದ ಪರಮಾರ್ಥದಲ್ಲಿಯೂ ಅಡಗುತ್ತವೆ. ಈ ಪರಮಾರ್ಥದಲ್ಲಿ ದೃಕ್ ದೃಶ್ಯವೆಂಬ ಭೇದವಿರುವುದಿಲ್ಲ. ಹೀಗೆಯೇ ಪ್ರಾತಿಭಾಸಿಕ ಜೀವವು ವ್ಯಾವಹಾರಿಕ ಜೀವದಲ್ಲಿಯೂ ಅದು ಪಾರಮಾರ್ಥಿಕ ಜೀವದ ಮೂಲಕ ಪರಮಾರ್ಥದಲ್ಲಿಯೂ ಅಡಗಿ ಕೊನೆಗೆ ಪರಮಾರ್ಥವಾದ ಬ್ರಹ್ಮ ಒಂದೇ ಉಳಿಯುತ್ತದೆ;ಇದೇ ಮುಕ್ತಿ ಎಂಬ ಉಪದೇಶದಿಂದ ಗ್ರಂಥವು ಸಮಾಪ್ತವಾಗುತ್ತದೆ.

ಹೀಗೆ ಸಂಕ್ಷೇಪವಾಗಿ ನಿರೂಪಿಸಿರುವ ಪರತತ್ವದ ಸ್ವರೂಪವನ್ನು ಅರಿತು ಅದನ್ನು ಅನುಭವಕ್ಕೆ ತಂದುಕೊಳ್ಳಲು ಹೇಳಿರುವ ವಿಚಾರ ಮಾರ್ಗ, ಅಥವಾ

CC-O. In Public Domain. Digitized by eGangotri

ಜ್ಞಾನಯೋಗವನ್ನೋ, ಅಥವಾ ತಮಗೆ ಸಾಧ್ಯವಾದ ಮತ್ತಾವ ಮಾರ್ಗವನ್ನೋ ಅವಲಂಬಿಸಿ ಮುಕ್ತರಾಗಬೇಕೆಂಬ ಇಚ್ಛೆ ಕೆಲವರಲ್ಲಿಯಾದರೂ ಮೂಡಿ ಅವರು ಅದರಲ್ಲಿ ತೊಡಗಿದರೆ ಈ ಪ್ರಯತ್ನ ಸಾರ್ಥಕವಾಗುವುದು,

ಎಂಬ ಆಶೆಯನ್ನು ನಿವೇದಿಸುವ
ಅನುವಾದಕ

CC-O. In Public Domain. Digitized by eGangotri

ದೃಗ್‌ದೃಶ್ಯವಿವೇಕ

ರೂಪಂ ದೃಶ್ಯಂ ಲೋಚನಂ ದೃಕ್ ತದ್ದೃಶ್ಯಂ ದೃಕ್ತು ಮಾನಸಮ್
ದೃಶ್ಯಾ ಧೀವೃತ್ತಯಃ ಸಾಕ್ಷೀ ದೃಗೇವ ನ ತು ದೃಶ್ಯತೇ ॥ ೧ ॥

ರೂಪಂ = ರೂಪವು ; ದೃಶ್ಯಂ = ನೋಟಕ್ಕೆ ವಿಷಯವಾದುದು, ನೋಡಲ್ಪಡುವುದು. ಚ = ಮತ್ತು ; ಲೋಚನಂ = ಕಣ್ಣು, ದೃಗಿಂದ್ರಿಯವು ; ದೃಕ್ = ನೋಡುವ ತತ್ತ್ವ ; ತತ್ = ಅದು, ಆ ದೃಗಿಂದ್ರಿಯವು ; ದೃಶ್ಯಂ = ನೋಟಕ್ಕೆ, ಎಂದರೆ, ತಿಳಿವಳಿಕೆಗೆ, ವಿಷಯ ; ತು = ಆದರೆ ; ಮಾನಸಂ = ಮನಸ್ಸು ; ದೃಕ್ = ಅದನ್ನು ನೋಡುವುದು, ತಿಳಿಯುವ ತತ್ತ್ವ ; ಧೀವೃತ್ತಯಃ = ಮನಸ್ಸಿನ ವೃತ್ತಿಗಳು ಎಂದರೆ ಕೆಲಸಗಳು ; ದೃಶ್ಯಾಃ = ತಿಳಿವಳಿಕೆಗೆ ವಿಷಯಗಳು ; ಸಾಕ್ಷೀ = ಅವನ್ನು ತಿಳಿಯುವ ಸಾಕ್ಷಿಯು ; ದೃಕ್ ಏವ = ತಿಳಿಯುವ ತತ್ವವೇ ; ತು - ಆದರೆ ; ನ ದೃಶ್ಯತೇ = (ಅದು ಯಾವಾಗಲೂ) ತಿಳಿಯಲ್ಪಡುವುದೇ ಇಲ್ಲ.

ರೂಪವು ನೋಟಕ್ಕೆ ವಿಷಯ[1] ; ಕಣ್ಣು ಅಥವಾ ದೃಗಿಂದ್ರಿಯವು[2] ಅದನ್ನು ನೋಡುವುದು[3], ಆ ದೃಗಿಂದ್ರಿಯವೂ ತಿಳಿವಳಿಕೆಗೆ ವಿಷಯವೇ, ಅದನ್ನು ನೋಡುವುದು ಮನಸ್ಸು. ಆ ಮನಸ್ಸಿನ ವೃತ್ತಿಗಳೂ ವಿಷಯಗಳೇ

---

1. ವಿಷಯ : ಯಾವುದನ್ನು ನೋಡುತ್ತೇವೋ ಅಥವಾ ತಿಳಿಯುತ್ತೇವೋ ಅದು ನೋಟಕ್ಕೆ, ತಿಳಿವಳಿಕೆಗೆ, ವಿಷಯ, ಕಾಣಿಸುವ ಅಥವಾ ತಿಳಿಯಲ್ಪಡುವ ತತ್ತ್ವ, the object of seeing or knowing.

2. ದೃಗಿಂದ್ರಿಯ : ಕಣ್ಣು ; ದೃಗಿಂದ್ರಿಯ ಎಂದರೆ ಹೊರಗಿನಿಂದ ಕಾಣುವ ದೇಹದ ಅಂಗ ಅಥವಾ ಅವಯವ ಮಾತ್ರವಲ್ಲ. ಇದೂ ಮತ್ತು ಇದರ ಹಿಂದಿರುವ ನರಗಳ ಮಂಡಲವೂ ಅವುಗಳ ಮೂಲವಾಗಿ ಮೆದುಳಿನಲ್ಲಿರುವ ದೃಕ್ ಕೇಂದ್ರವೂ (visual centre) ಎಲ್ಲವೂ ದೇಹದ ಅವಯವವೇ. ಇವನ್ನು ತನ್ನ ಕರಣ (instrument) ವಾಗಿ ಮಾಡಿಕೊಂಡು, ರೂಪದ ತಿಳಿವಳಿಕೆಯುಂಟಾಗುವಂತೆ ಕೆಲಸಮಾಡುತ್ತಿರುವ ಚೈತನ್ಯವೇ ದೃಗಿಂದ್ರಿಯ.

3. ದೃಕ್, ನೋಡುವ ತತ್ತ್ವ : ಯಾವುದು ನೋಡುತ್ತದೋ ಅಥವಾ ತಿಳಿಯುತ್ತದೋ ಅದು ನೋಡುವವನು, ನೋಡುವುದು ಅಥವಾ ನೋಡುವ ತತ್ತ್ವ ; ವಿಷಯಿ, the subject.

CC-O. In Public Domain. Digitized by eGangotri

ಅವನ್ನು ಅರಿಯುವುದು ಸಾಕ್ಷೀ. ಈ ಸಾಕ್ಷಿಯು ಮತ್ತೆ ಯಾವುದಕ್ಕೂ ವಿಷಯವಾಗುವುದೇ ಇಲ್ಲ[4], ಇದು ನೋಡಲ್ಪಡುವುದೇ ಇಲ್ಲ. ॥ ೧ ॥

ಮೊದಲನೆಯ ಶ್ಲೋಕದಲ್ಲಿ ಹೇಳಿದುದನ್ನೇ ವಿವರಿಸಿ ಹೇಳುತ್ತಿದ್ದಾರೆ :

ನೀಲಪೀತಸ್ಥೂಲಸೂಕ್ಷ್ಮಹ್ರಸ್ವದೀರ್ಘಾದಿಭೇದತಃ
ನಾನಾವಿಧಾನಿ ರೂಪಾಣಿ ಪಶ್ಯೇಲ್ಲೋಚನಮೇಕಧಾ ॥ ೨ ॥

ನೀಲಪೀತಸ್ಥೂಲಸೂಕ್ಷ್ಮಹ್ರಸ್ವದೀರ್ಘಾದಿಭೇದತಃ = ನೀಲಿ ಹಳದಿ, ಸಣ್ಣದು, ಮೋಟಾದ್ದು, ಉದ್ದನೆಯದು, ಮುಂತಾದ ಭೇದಗಳಿಂದ, ನಾನಾವಿಧಾನಿ = ಅನೇಕ ಬಗೆಯಾಗಿರುವ, ರೂಪಾಣಿ = ರೂಪಗಳನ್ನು, ಲೋಚನಂ = ಕಣ್ಣು, ಏಕಧಾ = ಒಂದೇ ರೀತಿಯಾಗಿದ್ದುಕೊಂಡು, ಪಶ್ಯೇತ್ = ನೋಡುತ್ತದೆ.

ನೀಲಿ ಹಳದಿ ಮುಂತಾದ ಅನೇಕ ಬಣ್ಣಗಳೂ ಸಣ್ಣದು ದೊಡ್ಡದು ದಪ್ಪದು ಮೋಟಾದದ್ದು ಉದ್ದನೆಯದು ಎಂಬುವ ಅನೇಕ ಆಕಾರಗಳೂ ಎಲ್ಲವೂ (ಕಣ್ಣು ನೋಡುವ) ರೂಪಗಳೇ ಇವು ಬಗೆಬಗೆಯಾಗಿದ್ದರೂ, ಇವನ್ನು ನೋಡುವ ಕಣ್ಣಿಗೆ ಇವುಗಳ ನಾನಾತ್ವ ಅಂಟುವುದಿಲ್ಲ. ಅದು (ನೋಡುವುದು ಎಂಬ) ಒಂದೇ ರೀತಿಯಾಗಿದ್ದುಕೊಂಡೇ ಎಲ್ಲ ರೂಪಗಳನ್ನೂ ನೋಡುತ್ತದೆ. ॥ ೨ ॥

ಆಂಧ್ಯಮಾಂದ್ಯಪಟುತ್ವೇಷು ನೇತ್ರಧರ್ಮೇಷು ಚೈಕಧಾ
ಸಂಕಲ್ಪಯೇನ್ಮನಃ ಶ್ರೋತ್ರತ್ವಗಾದೌ ಯೋಜ್ಯತಾಮಿದಮ್ ॥ ೩ ॥

---

4. ಇದನ್ನು ನೋಡುವುದು ಇನ್ನೊಂದು ಇದೆ ಎಂದರೆ ಅದನ್ನು ನೋಡುವ ಮತ್ತೊಂದು, ಅದನ್ನೂ ನೋಡುವ ಮಗದೊಂದು — ಹೀಗೆ ನಿಲುಕಡೆ ಇಲ್ಲದ ಸ್ಥಿತಿ ಬರುತ್ತದೆ. ಇದಕ್ಕೆ ಅನವಸ್ಥೆ ಎಂದು ಹೆಸರು. ಇದು ವಿಚಾರದಲ್ಲಿ ದೋಷವಾಗುತ್ತದೆ. ಈ ದೋಷವನ್ನು ತಪ್ಪಿಸುವುದಕ್ಕೆ ನೋಡಲ್ಪಡದ ನೋಡುವವನು ಎಂಬುದನ್ನು ಒಪ್ಪದಿದ್ದರೆ ಬೇರೆ ದಾರಿಯಿಲ್ಲ. 'ಅದೃಷ್ಟೋ ದ್ರಷ್ಟಾ, ಅಶ್ರುತೋ ಶ್ರೋತಾ, ಅಮತೋಮಂತಾ ಅವಿಜ್ಞಾತೋ ವಿಜ್ಞಾತಾ'' (ಬೃ.3. 7.23) (ನೋಡಲ್ಪಡದ ನೋಡುವವನು. ಕೇಳಲ್ಪಡದ ಕೇಳುವವನು, ಯೋಚಿಸಲ್ಪಡದ ಯೋಚಿಸುವವನು, ತಿಳಿಯಲ್ಪಡದ ತಿಳಿಯುವವನು) ಎಂಬ ಶ್ರುತಿಯು ಅದಕ್ಕೆ ಪ್ರಮಾಣವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಂಧ್ಯಮಾಂದ್ಯಪಟುತ್ವೇಷು = ಕುರುಡು ಮುಂದತೆ ಚುರುಕಾಗಿರುವುದು (ಇವೇ ಮುಂತಾದ); ನೇತ್ರಧರ್ಮೇಷು = ಕಣ್ಣಿನ ಧರ್ಮಗಳಲ್ಲಿ (ಗುಣಗಳಲ್ಲಿ); ಮನಃ = ಮನಸ್ಸು ; ಏಕಧಾ = ಒಂದೇ ರೀತಿಯಾಗಿ ; ಸಂಕಲ್ಪಯೇತ್ = ಅರಿಯುತ್ತದೆ. ಇದಂ = ಇದನ್ನು; ಶ್ರೋತ್ರತ್ವಗಾದೌ = ಕಿವಿ ಚರ್ಮ ಮುಂತಾದುವುಗಳಿಗೆ; ಯೋಜ್ಯತಾಂ = ಹೊಂದಿಸಿಕೊಳ್ಳಬೇಕು.

ಕುರುಡು, ಮುಂದತೆ, ಚುರುಕಾಗಿರುವುದು, ಇವು ಕಣ್ಣಿನ ಧರ್ಮಗಳು ಅಥವಾ ಗುಣಗಳು. ಕಣ್ಣಿನಲ್ಲಿ ಈ ಗುಣಭೇದಗಳುಂಟಾದಾಗ ಅವನ್ನು ಅರಿಯುವ ಮನಸ್ಸು ತನ್ನಲ್ಲಿ ಯಾವ ಮಾರ್ಪಾಡೂ ಇಲ್ಲದೆ, ತಾನು (ಅರಿಯುವುದು ಎಂಬ) ಒಂದೇ ರೀತಿಯಾಗಿದ್ದುಕೊಂಡು, ಈ ಬದಲಾವಣೆಗಳನ್ನು ಅರಿಯುತ್ತದೆ. ಈ ಕ್ರಮವನ್ನು ಕಿವಿ,ಚರ್ಮ ಮುಂತಾದ ಇತರ ಇಂದ್ರಿಯಗಳಿಗೂ ಅನ್ವಯಿಸಿಕೊಳ್ಳಬೇಕು, ಹೊಂದಿಸಿಕೊಳ್ಳಬೇಕು.

ರೂಪ ಮೊದಲಾದ ವಿಷಯಗಳನ್ನು ಕಣ್ಣು ಮೊದಲಾದ ಇಂದ್ರಿಯಗಳು ಗ್ರಹಿಸುತ್ತವೆ ಅಥವಾ ತಿಳಿಯುತ್ತವೆ. ಆಗ ರೂಪಾದಿಗಳು ವಿಷಯಗಳು, ಇಂದ್ರಿಯಗಳು ವಿಷಯಿಗಳು. ವಿಷಯಗಳಲ್ಲಿ ಆಗುವ ಮಾರ್ಪಾಡುಗಳನ್ನು ತಿಳಿಯುವ ಇಂದ್ರಿಯಗಳು ತಮ್ಮಲ್ಲಿ ಅವಕ್ಕೆ ಅನುಗುಣವಾದ ಯಾವ ಬದಲಾವಣೆಯೂ ಇಲ್ಲದೆ ವಿಷಯಗಳನ್ನೂ ಅವುಗಳ ಮಾರ್ಪಾಡುಗಳನ್ನೂ ತಿಳಿಯುತ್ತವೆ. ಆದರೆ ಈ ಇಂದ್ರಿಯಗಳೇ ವಿಷಯಗಳಾದಾಗ ಅವುಗಳ ಬದಲಾವಣೆಗಳನ್ನು ಅರಿಯುವ ಮನಸ್ಸು ತನ್ನಲ್ಲಿ ಅದಕ್ಕೆ ಅನುಗುಣವಾದ ಯಾವ ಮಾರ್ಪಾಡೂ ಇಲ್ಲದೆ ತಾನು ಒಂದೇ ರೀತಿಯಾಗಿ ಇರುತ್ತದೆ. ಹೀಗೆ ಬದಲಾವಣೆಗಳು ಆಗುವುದು ವಿಷಯದಲ್ಲಿ. ವಿಷಯಿಯಲ್ಲಲ್ಲ. ವಿಷಯಿಯು ಏಕರೂಪದಲ್ಲಿದ್ದಾಗಲೇ ವಿಷಯಿಯಾಗಿರುವುದು. ಅದರಲ್ಲಿ ಮಾರ್ಪಾಡುಗಳಾದಾಗ ಅದು ಮತ್ತೊಂದು ವಿಷಯಿಯ ವಿಷಯವಾಗುತ್ತದೆ, ನೋಡುವ ಮತ್ತೊಂದಕ್ಕೆ ಕಾಣುತ್ತದೆ. ರೂಪ, ಕಣ್ಣು, ಮನಸ್ಸುಗಳಿಗೆ ಹೇಳಿದ ಈ ಕ್ರಮವನ್ನು ಇತರ ಇಂದ್ರಿಯಗಳಿಗೂ ಅನ್ವಯಿಸಿಕೊಳ್ಳಬೇಕು. ॥ ೩ ॥

ಮೊದಲನೆಯ ಶ್ಲೋಕದ ಕೊನೆಯಲ್ಲಿ "ಸಾಕ್ಷಿಯು ಮತ್ತೆ ಯಾವುದಕ್ಕೂ ವಿಷಯವಾಗುವುದಿಲ್ಲ" ಎಂಬುದನ್ನು ಸ್ಪಷ್ಟಪಡಿಸುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಮಃ ಸಙ್ಕಲ್ಪಸಂದೇಹೌ ಶ್ರದ್ಧಾಶ್ರದ್ಧೇ ಧೃತೀತರೇ
ಹ್ರೀರ್ಧೀರ್ಭೀರಿತ್ಯೇವಮಾದೀನ್ ಭಾಸಯತ್ಯೇಕಧಾ ಚಿತಿಃ ॥ ೪ ॥

ಕಾಮಃ = ಆಸೆ; ಸಂಕಲ್ಪಸಂದೇಹೌ = ಸಂಕಲ್ಪ, ಸಂಶಯಗಳು; ಶ್ರದ್ಧಾ-ಶ್ರದ್ಧೇ = ನಂಬಿಕೆ ಮತ್ತು ನಂಬಿಕೆ ಇಲ್ಲದಿರುವುದು ; ಧೃತೀತರೇ = ಜ್ಞಾಪಕ ಮರೆವುಗಳು ; ಹ್ರೀಃ = ನಾಚಿಕೆ ; ಧೀಃ = ನಿಶ್ಚಯಾತ್ಮಕವಾದ ಬುದ್ಧಿ ; ಭೀಃ = ಹೆದರಿಕೆ ; ಇತಿ ಏವಂ ಅದೀನ್ = ಎಂಬ ಇವೇ ಮೊದಲಾದ (ಮನಸ್ಸಿನ) ವೃತ್ತಿಗಳನ್ನು ; ಚಿತಿಃ = ಶುದ್ಧ ಚೈತನ್ಯವು ; ಏಕಧಾ = ಒಂದೇ ರೂಪವಾಗಿದ್ದು ಕೊಂಡೇ ; ಭಾಸಯತಿ = ಬೆಳಗುತ್ತದೆ, ಪ್ರಕಾಶಿಸುತ್ತದೆ.

"ಕಾಮಃ ಸಙ್ಕಲ್ಪೋವಿಚಿಕಿತ್ಸಾಶ್ರದ್ಧಾಶ್ರದ್ಧಾ ಧೃತಿರಧೃತಿರ್ಹ್ರೀರ್ಧೀರ್ಭೀರಿತ್ಯೇತತ್ ಸರ್ವಂ ಮನ ಏವ" (ಬೃ.ಆ.ಉ. 1.2.3) ಶ್ರುತಿಯಲ್ಲಿ ಹೇಳಿರುವ ಮನಸ್ಸಿನ ವೃತ್ತಿಗಳನ್ನೂ, ಏವಂ ಆದಯಃ ಎಂಬ ವಾಕ್ಯದಿಂದ ಇತರ ಶ್ರುತಿಗಳಲ್ಲಿ ಹೇಳಿರುವುದನ್ನೂ ಸೇರಿಸಿ ಆಂತಕರಣದ ಎಲ್ಲ ವೃತ್ತಿಗಳನ್ನೂ ಹೇಳಿ ಅವೆಲ್ಲವನ್ನೂ ಅವುಗಳ ಭೇದಗಳನ್ನೂ ಅರಿಯುವ ಶುದ್ಧ ಚೈತನ್ಯವು ಯಾವ ಬಗೆಯ ಮಾರ್ಪಾಡನ್ನೂ ಹೊಂದದೆ ಒಂದೇ ರೀತಿಯಾಗಿರುತ್ತದೆ ಎಂದು ಹೇಳಿದೆ.

ಹೀಗೆ ಬದಲಾವಣೆಗಳನ್ನು ಹೊಂದತಕ್ಕ ತತ್ತ್ವವು ದೃಶ್ಯ, ಎಂದರೆ ದೃಷ್ಟಿ ವಿಷಯ, ಕಾಣಿಸುವುದು; ಬದಲಾವಣೆಗೆ ಒಳಗಾಗದೆಯೇ ವಿಷಯವನ್ನೂ ಅದರ ಮಾರ್ಪಾಡುಗಳನ್ನೂ ಅರಿಯುವ ತತ್ತ್ವ ವಿಷಯೀ, ದೃಕ್ ಎಂದಂತಾಯಿತು.

ಚೈತನ್ಯ ಸ್ವರೂಪವಾದ ಸಾಕ್ಷಿಯೂ ಮತ್ತೊಂದು ತತ್ತ್ವಕ್ಕೆ ಏಕೆ ವಿಷಯ ವಾಗಬಾರದು, ಮೇಲಿನ ಶ್ರೇಣಿಯಲ್ಲಿ ಕಂಡ ಇತರ ವಿಷಯಗಳಂತೆ, ಎಂಬು ದನ್ನು ಮೊದಲನೆಯ ಶ್ಲೋಕದ ವಿವರಣೆಯಲ್ಲಿ ಹೇಳಿದೆ.

ಈ ಸಾಕ್ಷಿಚೈತನ್ಯದ ಸ್ವರೂಪವನ್ನು ಮುಂದಿನ ಶ್ಲೋಕದಲ್ಲಿ ಹೇಳಿದೆ.

ನೋದೇತಿ ನಾಸ್ತಮೇತ್ಯೇಷಾ ನ ವೃದ್ಧಿಂ ಯಾತಿ ನ ಕ್ಷಯಮ್
ಸ್ವಯಂ ವಿಭಾತ್ಯಥಾನ್ಯಾನಿ ಭಾಸಯೇತ್ಸಾಧನಂ ವಿನಾ ॥ ೫ ॥

ಏಷಾ = ಈ ಶುದ್ಧ ಚೈತನ್ಯವಾದ ಸಾಕ್ಷಿಯು; ನ ಉದೇತಿ = ಉದಯವಾಗುವು ದಿಲ್ಲ, ಹುಟ್ಟುವುದಿಲ್ಲ; ನ ಅಸ್ತಂ ಏತಿ = ಮುಳುಗುವುದೂ ಇಲ್ಲ, ಅದೃಶ್ಯವಾಗು ವುದೂ ಇಲ್ಲ ; ವೃದ್ಧಿಂ = ಬೆಳವಣಿಗೆಯನ್ನು; ನ ಯಾತಿ = ಹೊಂದುವುದಿಲ್ಲ;

Sri Vidyabharathi Book Centre, Sringeri

CC-O. In Public Domain. Digitized by eGangotri

ನ ಕ್ಷಯಂ = ಕಡಿಮೆಯಾಗುವುದೂ ಇಲ್ಲ; ಸ್ವಯಂ = ತಾನಾಗಿಯೇ; ವಿಭಾತಿ = ಪ್ರಕಾಶಿಸುತ್ತದೆ, ಬೆಳಗುತ್ತದೆ ; ಅಥ = ಮತ್ತು ; ಅನ್ಯಾನಿ = (ಇರುವಂತೆ ತೋರುವ) ತಾನಲ್ಲದ ಇತರ ವಸ್ತುಗಳನ್ನೂ; ಸಾಧನಂ ವಿನಾ = ಬೇರೊಂದು ಉಪಕರಣದ ಅಪೇಕ್ಷೆ ಇಲ್ಲದೆಯೇ; ಭಾಸಯೇತ್ = ಬೆಳಗುತ್ತದೆ, ಕಾಣುವಂತೆ ಮಾಡುತ್ತದೆ.

ಶುದ್ಧಚೈತನ್ಯ ಸ್ವರೂಪವಾದ ಈ ಸಾಕ್ಷಿಗೆ ಹುಟ್ಟು ಸಾವುಗಳು ಬೆಳೆವು ಅಳಿವು ಮುಂತಾದ ಯಾವ ಭಾವವಿಕಾರಗಳೂ ಇರುವುದಿಲ್ಲ. ಇದು ಸ್ವಯಂ ಪ್ರಕಾಶವಾದದ್ದು, ತಾನಾಗಿಯೇ, ಮತ್ತೊಂದು ತತ್ವದ ಸಹಾಯವನ್ನು ಅಪೇಕ್ಷಿಸದೆಯೇ, ಪ್ರಕಾಶಿಸುತ್ತದೆ. ಇದಕ್ಕಿಂತ ಬೇರೆಯಾಗಿ ಇರುವಂತೆ ತೋರುವ ಇತರ ತತ್ತ್ವಗಳನ್ನೂ ಬೆಳಗುತ್ತದೆ, ಹೀಗೆ ಅವುಗಳನ್ನು ಬೆಳಗುವುದಕ್ಕೂ ಮತ್ತಾವ ತತ್ತ್ವದ ಸಹಾಯವೂ ಬೇಕಿಲ್ಲ. ॥ ೫ ॥

ಈ ಸಾಕ್ಷಿಯು ಶುದ್ಧಚೈತನ್ಯಸ್ವರೂಪವೆಂದುದರಿಂದ ಇದು ಶುದ್ಧ ಚೈತನ್ಯದಂತೆ ಅನುಭವಿಗಳಿಗೆ ಅಪರೋಕ್ಷವಾದದ್ದು, 'ಯತ್ಸಾಕ್ಷಾದಪರೋಕ್ಷಾದ್ಬ್ರಹ್ಮ' (ಬೃ. 1.5.1) ಎಂಬ ಶ್ರುತಿಯಂತೆ. 'ನೀನು' ಎಂಬ ವಿಷಯ ರೂಪವಾದ ತಿಳಿವಳಿಕೆಗೂ 'ನಾನು' ಎಂಬ (ವ್ಯಾವಹಾರಿಕ) ವಿಷಯಿಯಾದ ಅಹಂಕಾರ ರೂಪವಾದ ತಿಳಿವಳಿಕೆಗೂ ಉತ್ಪತ್ತಿ ಲಯಗಳಿವೆ. ಆದರೆ ಅವುಗಳನ್ನೂ ಅವುಗಳ ಉತ್ಪತ್ತಿ ಲಯಗಳನ್ನೂ ನೋಡುತ್ತಿರುವ ಚೈತನ್ಯಕ್ಕೆ ಇವು ಎರಡೂ ಇಲ್ಲ. ಎಂದರೆ ಹುಟ್ಟುವುದು, ಇರುವುದು (ವ್ಯಾವಹಾರಿಕವಾಗಿ), ಬೆಳೆಯುವುದು, ಮುಪ್ಪು, ಕ್ಷಯವಾಗುವುದು, ನಾಶವಾಗುವುದು (ಸಾವು, ಲಯ) ಎಂಬ ಆರು ಭಾವವಿಕಾರಗಳೂ ಇಲ್ಲವೆಂದಾಯಿತು. ಸ್ವಯಂ ಪ್ರಕಾಶತ್ವಕ್ಕೆ, 'ತಮೇವಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ' (ಮುಂ.2.2.11) ಎಂಬ ಶ್ರುತಿಯೂ, ಮತ್ತು ಸಚ್ಚಿದಾನಂದ ರೂಪವಾದ 'ನಾನು' ಎಂಬ ತಿಳಿವಳಿಕೆಯ ನಿಜವಾದ ಅರ್ಥವಾದ ಈ ಅರಿವು ಇದ್ದಾಗಲೇ ಅಹಂಕಾರವೇ ಮುಂತಾದ ಇತರ ತಿಳಿವಳಿಕೆಗಳು ಉಂಟಾಗುವುವು ಎಂಬ ಅನುಭವವೂ ಪ್ರಮಾಣವಾಗಿವೆ. ಇದರ ಸ್ವರೂಪವು ಯಾವಾಗಲೂ ದೃಕ್ ಆಗಿಯೇ ಇದೆ ; ಎಂದಿಗೂ ದೃಶ್ಯವಲ್ಲ. 'ಅದೃಷ್ಟೋದ್ರಷ್ಟಾ, ಅಶ್ರುತೋ ಶ್ರೋತಾ ಅಮತೋ ಮಂತಾ ಅವಿಜ್ಞಾತೋ ವಿಜ್ಞಾತಾ' (ಬೃ. ಉ. 3. 7. 23), 'ಕಾಣದಿರುವ ನೋಡುವವನು, ಕೇಳಲ್ಪಡದ ಕೇಳುವವನು, ಯೋಚಿಸಲ್ಪಡದ ಯೋಚಿಸುವವನು, ತಿಳಿಯಲ್ಪಡದ ತಿಳಿಯುವವನು' ಎಂಬಂಥ ಶ್ರುತಿಗಳು

CC-O. In Public Domain. Digitized by eGangotri

ಹೇಳುತ್ತಿರುವುದು ಈ ಒಳಗಿನ ಚೈತನ್ಯವಾದ ಪರವಸ್ತುವನ್ನೇ ಎಂದು ತಾತ್ಪರ್ಯ. ॥ ೫ ॥

ಆಕ್ಷೇಪ : ಆದರೆ ವಿಷಯವನ್ನು ಬೆಳಗುವುದು ಸಾಕ್ಷಿ ಎಂದು ಮೊದಲನೆಯ ಶ್ಲೋಕದಲ್ಲಿ ಹೇಳಿ, ಇಲ್ಲಿ ಆ ಬೆಳಗುವಿಕೆ ಚೈತನ್ಯದ ಧರ್ಮವೆನ್ನುವುದು ವಿರೋಧವಾಗಲಿಲ್ಲವೇ ?

ಸಮಾಧಾನ : ಹಾಗಲ್ಲ. ಮೊದಲು ಸಾಕ್ಷಿ ಎಂದು ಕರೆದಿರುವ ತತ್ವವನ್ನೇ ಇಲ್ಲಿಯೂ ಮತ್ತು ಈ ಪ್ರಕರಣದ ಕೊನೆಯವರೆಗೆ ಇತರ ಸಂದರ್ಭಗಳಲ್ಲಿಯೂ ಚೈತನ್ಯವೆಂದು ಕರೆದಿದೆ. ಸಾಕ್ಷೀ, ಚಿತಿ ಅಥವಾ ಚಿತ್, ಚೈತನ್ಯ, ಜ್ಞಾನ, ಬೋಧೆ, ಪ್ರತ್ಯಗಾತ್ಮಾ (ಒಳಗಿನ ಆತ್ಮ) ಕೂಟಸ್ಥ, ಎಂಬ ಎಲ್ಲ ಶಬ್ದಗಳೂ ಒಂದೇ ಅರ್ಥವುಳ್ಳ ಪರ್ಯಾಯ ಪದಗಳು.

ಚಿತ್ ಅಚಿತ್ ರೂಪಗಳಾದ ವಿಷಯಿವಿಷಯಗಳು ಅತ್ಯಂತ ಭಿನ್ನವೂ ವಿರುದ್ಧವೂ ಆಗಿವೆ. ಒಂದರ ಧರ್ಮ ಮತ್ತೊಂದಕ್ಕೆ ಬರುವ ಹಾಗೆಯೇ ಇಲ್ಲ. ಆದ್ದರಿಂದ ವಿಷಯವಾದ ಅಂತಃಕರಣವು ಎಂದಿಗೂ, ಸಾಪೇಕ್ಷವಾಗಿಯಾದರೂ (relatively), ವಿಷಯಿಯಾಗುವುದು ಸಾಧ್ಯವೇ ಇಲ್ಲ. ಇದಕ್ಕೂ ವಿಷಯಿಯಾದ ಚೈತನ್ಯಕ್ಕೂ ಯಾವ ಸಂಬಂಧವನ್ನೂ ಹೇಳುವುದಕ್ಕಾಗುವುದಿಲ್ಲ ; ಆದ್ದರಿಂದ ಸಂಸಾರ, ಬಂಧ, ಮೋಕ್ಷ ಇವೆಲ್ಲವೂ ಅರ್ಥವಿಲ್ಲದವು ಆಗುತ್ತವೆ. ಮೋಕ್ಷವನ್ನೂ ಅದರ ಸಾಧನೆಯನ್ನೂ ಬೋಧಿಸುವ ಶಾಸ್ತ್ರವೂ ವ್ಯರ್ಥವಾಗುತ್ತದೆ. ಇಂಥ ಆಕ್ಷೇಪಗಳಿಗೆ ಸಮಾಧಾನ ಹೇಳುವುದಕ್ಕೆ ಚಿಚ್ಛಾಯೆ, ಚೈತನ್ಯದ ನೆರಳು ಅಥವಾ ತೋರಿಕೆ ಎಂಬ ಒಂದು ಕಲ್ಪನೆಯನ್ನು (hypothesis, postulation) ಒಪ್ಪಿಕೊಂಡು ವಿಚಾರವನ್ನು ಮುಂದುವರಿಸುತ್ತಾರೆ.

ಚಿಚ್ಛಾಯಾವೇಶತೋ ಬುದ್ಧೌ ಭಾನಂಧೀಸ್ತು ದ್ವಿಧಾ ಸ್ಥಿತಾ
ಏಕಾಹಂಕೃತಿರನ್ಯಾಸ್ಯಾದಂತಃಕರಣರೂಪಿಣೀ ॥ ೬ ॥

ಬುದ್ಧೌ = ಅಂತಃಕರಣದಲ್ಲಿ ; ಚಿಚ್ಛಾಯಾವೇಶತಃ = ಚೈತನ್ಯದ ನೆರಳಿನ ಆಕಾರದ ಹೊಳಪಿನ ಪ್ರವೇಶದಿಂದ (ಉಂಟಾಗುವ) ; ಭಾನಂ = ತೋರಿಕೆಯಾದ ; ಧೀಃ ತು = ಬುದ್ಧಿಯಾದರೆ; ದ್ವಿಧಾ = ಎರಡು ಬಗೆಯಾಗಿ ; ಸ್ಥಿತಾ = ಇರುತ್ತದೆ. ಏಕಾ = (ಅವುಗಳಲ್ಲಿ) ಒಂದು ; ಅಹಂಕೃತಿಃ = (ಕರ್ತೃತ್ವರೂಪವಾಗಿದ್ದುಕೊಂಡು) ಅಹಂಕಾರವೆಂಬುದು ; ಅನ್ಯಾ =

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತೊಂದು ; ಅಂತಃಕರಣರೂಪಿಣೀ = ಇತರ ಎಲ್ಲ ವೃತ್ತಿಗಳ ರೂಪವಾಗಿರುವ ಮನಸ್ಸು ಎಂಬ ಹೆಸರುಳ್ಳ ಅಂತಃಕರಣವು ; ಸ್ಯಾತ್ = ಆಗುವುದು.

ಸ್ವತಃ ಜಡವಾದ ಅಂತಃಕರಣದಲ್ಲಿ ಚೈತನ್ಯದ ಆಕಾರದ ಪ್ರವೇಶ ಅಥವಾ ಸಂಪರ್ಕವಾದಾಗ ಅದು ಚೈತನ್ಯ ಉಳ್ಳಂತೆಯೇ ವರ್ತಿಸುತ್ತದೆ. ಹೀಗೆ ಚೈತನ್ಯದ ಪ್ರತಿಬಿಂಬದಿಂದ ಕೂಡಿರುವ ಬುದ್ಧಿಯು ಎರಡು ಬಗೆಯಾಗಿ ಇರುತ್ತದೆ. 'ನಾನು ಮಾಡುತ್ತೇನೆ' ಎಂಬ ತಿಳಿವಳಿಕೆಗೆ ಆಶ್ರಯವಾದ ಕರ್ತೃತ್ವ ರೂಪವಾದ ದ್ರಷ್ಟೃವಾಗಿಯೂ ಕಾಣುವ 'ಅಹಂಕಾರ' ಒಂದು ; 'ಕಾಮಃ ಸಂಕಲ್ಪಃ.....' ಎಂದು ಮುಂತಾಗಿ ಹೇಳಿರುವ ಇತರ ಎಲ್ಲ ವೃತ್ತಿಗಳ ರೂಪದಲ್ಲಿಯೂ ಇರುವ ಅಂತಃಕರಣವೆಂಬುದು ಮತ್ತೊಂದು.

ಹೀಗೆ ಎರಡು ಬಗೆಯಾಗಿ ವರ್ತಿಸುತ್ತಿರುವ ಅಂತಃಕರಣವು ಒಂದೇ ಪದಾರ್ಥ. ॥ ೬ ॥

ಜಡರೂಪವಾದ ದೇಹಕ್ಕೆ ಚೈತನ್ಯದ ತೋರಿಕೆಯುಂಟಾಗುವ ರೀತಿಯನ್ನು ಹೇಳುತ್ತಾರೆ :

ಛಾಯಾಹಂಕಾರಯೋರೈಕ್ಯಂ ತಪ್ತಾಯಃ ಪಿಂಡವನ್ಮತಮ್
ತದಹಂಕಾರತಾದಾತ್ಮ್ಯಾತ್ ದೇಹಶ್ಚೇತನತಾಮಗಾತ್ ॥ ೭ ॥

ಛಾಯಾಹಂಕಾರಯೋಃ = ಚೈತನ್ಯದ ತೋರಿಕೆ ಮತ್ತು ಅಹಂಕಾರ ಇವುಗಳ ; ಐಕ್ಯಂ = ಏಕತೆಯು, ಒಂದಾಗಿರುವಿಕೆಯು ; ತಪ್ತಾಯಃಪಿಂಡವತ್ = ಕಾದ ಕಬ್ಬಿಣದ ಗುಂಡಿನಂತೆ (ಎಂದು) ; ಮತಂ = ಪರಗಣಿಸಲ್ಪಟ್ಟಿದೆ. ತದಹಂಕಾರತಾದಾತ್ಮ್ಯಾತ್ = ಅಂಥ ಅಹಂಕಾರದೊಡನೆ ಒಂದಾಗಿರುವುದರಿಂದ (ಒಂದಾಗಿ ತೋರುವುದರಿಂದ) ; ದೇಹಃ = ಶರೀರವೂ ; ಚೇತನತಾಂ = ಚೈತನ್ಯವನ್ನು ; ಅಗಾತ್ = ಹೊಂದಿದೆ.

ಕಾದಕಬ್ಬಿಣದ ಗುಂಡಿನಲ್ಲಿ ಬೆಂಕಿಯ ಧರ್ಮವಾದ ಕಾವು ಕಬ್ಬಿಣದಲ್ಲಿ ಬೆರೆತುಕೊಂಡು ಅದರ ಧರ್ಮವಾಗಿಯೇ ಕಾಣುತ್ತದೆ. ಬೆಂಕಿ ಕಬ್ಬಿಣಗಳು ಒಂದೇ ಅಲ್ಲದಿದ್ದರೂ ಒಂದಾಗಿಯೇ ಕಾಣುತ್ತವೆ. ಚೈತನ್ಯದ ಆಭಾಸ (ತೋರಿಕೆ) ಮತ್ತು ಅಹಂಕಾರ ಇವುಗಳು ಅಭಿನ್ನವಾಗಿ, ಅವಿವಿಕ್ತವಾಗಿ, ಒಂದೇ ಆಗಿ ಕಾಣುವುದೂ ಇದರಂತೆಯೇ. ಇಂಥ, ಎಂದರೆ, ಚೈತನ್ಯಾಭಾಸದಿಂದ ಸಚೇತನವಾಗಿ ತೋರುವ ಅಹಂಕಾರವು ದೇಹದೊಂದಿಗೆ ಕೂಡಿ

CC-O. In Public Domain. Digitized by eGangotri

ಹೀಗೆಯೇ ಒಂದಾಗಿರುವಂತೆ ಕಾಣುತ್ತದೆ. ಈ ಕಾರಣದಿಂದ (ಜಡವಾದ) ದೇಹವೂ ಕೂಡ ಚೈತನ್ಯ ಉಳ್ಳದ್ದಾಗಿ ತೋರುತ್ತದೆ. ॥ ೭ ॥

ನಾನು ನೋಡುತ್ತೇನೆ, ನಾನು ಕೇಳುತ್ತೇನೆ, ಮುಂತಾದ ತಿಳಿವಳಿಕೆಗಳಲ್ಲಿ ಅಹಂಕಾರದ ಮತ್ತು ಇಂದ್ರಿಯಗಳ ಏಕೀಭಾವ ಕಾಣುತ್ತದೆ. ಆದರೆ ಇಂದ್ರಿಯಗಳು ತಮ್ಮ ಗೋಲಕಗಳ ಸಂಬಂಧವಿಲ್ಲದೆ ಕೆಲಸ ಮಾಡಲಾರವು; ಈ ಗೋಲಕಗಳು ದೇಹದ ಅವಯವಗಳಾಗಿವೆ; ಆದ್ದರಿಂದ ಈ ತಾದಾತ್ಮ್ಯ ಅಥವಾ ಏಕೀಭಾವವೂ ದೇಹ ಅಹಂಕಾರಗಳ ತಾದಾತ್ಮ್ಯದಲ್ಲಿಯೇ ಸೇರುತ್ತದೆ. ಇದನ್ನು ಬೇರೆಯಾಗಿ ಹೇಳಬೇಕಾಗಿಲ್ಲ.

ಅಹಂಕಾರಸ್ಯ ತಾದಾತ್ಮ್ಯಂ ಚಿಚ್ಛಾಯಾದೇಹಸಾಕ್ಷಿಭಿಃ
ಸಹಜಂ ಕರ್ಮಜಂ ಭ್ರಾಂತಿಜನ್ಯಂ ಚ ತ್ರಿವಿಧಂ ಸ್ಮೃತಮ್ ॥ ೮ ॥

ಚಿಚ್ಛಾಯಾ ದೇಹ ಸಾಕ್ಷಿಭಿಃ = ಚೈತನ್ಯದ ತೋರಿಕೆ, ಪ್ರತಿಬಿಂಬ, ಶರೀರ ಮತ್ತು ಸಾಕ್ಷಿ ಇವುಗಳೊಡನೆ; ಅಹಂಕಾರಸ್ಯ = ಅಹಂಕಾರದ; ತಾದಾತ್ಮ್ಯಂ = ಒಂದಾಗಿರುವಿಕೆಯು, ಏಕೀಭಾವವು; ಕ್ರಮಾತ್ = ಕ್ರಮವಾಗಿ; ಸಹಜಂ = ಸಹಜವಾದದ್ದು; ಕರ್ಮಜಂ = ಕರ್ಮದಿಂದ ಉಂಟಾದದ್ದು; ಚ = ಮತ್ತು; ಭ್ರಾಂತಿಜನ್ಯಂ = ಭ್ರಾಂತಿಯಿಂದ, ತಪ್ಪು ತಿಳಿವಳಿಕೆಯಿಂದ ಉಂಟಾದದ್ದು; (ಎಂಬ) ತ್ರಿವಿಧಂ = ಮೂರು ಬಗೆಯಾದದ್ದು.

ಆಹಂಕಾರವು ಚೈತನ್ಯದ ಪ್ರತಿಬಿಂಬ, ಶರೀರ ಮತ್ತು ಸಾಕ್ಷಿ ಈ ಮೂರರೊಡನೆಯೂ ಬೆರೆತು ಒಂದಾಗಿ ಕಾಣುತ್ತದೆ ಎಂದು ಹೇಳಿದೆ. ಈ ಏಕೀಭಾವಗಳ ವಿಭಿನ್ನ ರೀತಿಗಳ ಮತ್ತು ಅವುಗಳ ಮೂಲಗಳ ವಿಚಾರ ಇಲ್ಲಿ ನಡೆದಿದೆ: ಅಹಂಕಾರ ಮತ್ತು ಚಿದಾಭಾಸಗಳ ತಾದಾತ್ಮ್ಯವು ಸಹಜ ಎಂದರೆ ಅಹಂಕಾರ, ಚಿದಾಭಾಸ ಮತ್ತು ಆವುಗಳ ಸಂಬಂಧವಾದ ತಾದಾತ್ಮ್ಯ ಇವು ಮೂರೂ ಒಟ್ಟಿಗೆ ಉತ್ಪತ್ತಿಯಾದುವು. ಅಹಂಕಾರ ಮತ್ತು ಶರೀರ ಇವುಗಳ ತಾದಾತ್ಮ್ಯವು ಕರ್ಮದಿಂದ ಉಂಟಾದದ್ದು. ಎಂದರೆ ಜಾಗ್ರದವಸ್ಥೆಯಲ್ಲಿ ಅನುಭವಿಸಬಹುದಾದ ಕರ್ಮದಿಂದಲೇ ಉಂಟಾಗುತ್ತದೆ. ಅಂಥ ಕರ್ಮವೇ ಇದಕ್ಕೆ ಮೂಲ.

ಅಹಂಕಾರ ಮತ್ತು ಸಾಕ್ಷಿ ಇವುಗಳ ತಾದಾತ್ಮ್ಯವು ಭ್ರಾಂತಿಯಿಂದ, ಎಂದರೆ ತಪ್ಪು ತಿಳಿವಳಿಕೆಯಿಂದ ಉಂಟಾದದ್ದು. ಅಧಿಷ್ಠಾನದ ತಿಳಿವಳಿಕೆ ಇಲ್ಲದಿರುವುದೇ ತಪ್ಪು ತಿಳಿವಳಿಕೆಯಿಂದಾಗಿ, ಹಗ್ಗದಲ್ಲಿ ಹಾವು ಕಂಡಾಗ

CC-O. Jayachamarajendra Shri Jayalakshmi Vilas Sanskrit Granthamala, Mysuru. Digitized by eGangotri

CC-O. In Public Domain. Digitized by eGangotri

ಇದು ಎಂಬ ಜ್ಞಾನಕ್ಕೆ ಅಧಿಷ್ಠಾನ ಅಥವಾ ಆಶ್ರಯವಾದ ಹಗ್ಗದ ಸ್ವರೂಪದ ಅರಿವು ಇಲ್ಲದಿರುವುದೇ ಹಾವು ಎಂಬ ಭ್ರಾಂತಿಗೆ ಕಾರಣ. ಸಾಕ್ಷಿಯ ಸ್ವರೂಪವಾದ, ಆಲ್ಲಿ ಬರುತ್ತಿರುವ ಜ್ಞಾನಕ್ಕೆ ಅಧಿಷ್ಠಾನವಾದ, ಬ್ರಹ್ಮದ ಅರಿವು ಇಲ್ಲದಿರುವುದೇ ತಪ್ಪು ತಿಳಿವಳಿಕೆ ಅಥವಾ ಭ್ರಾಂತಿ. ಇದೇ ಚಿದಾಭಾಸ ಮತ್ತು ಸಾಕ್ಷಿಗಳ ತಾದಾತ್ಮ್ಯಕ್ಕೆ ಕಾರಣ.

ಈ ಮೂರು ಬಗೆಯ ಏಕೀಭಾವವೂ ಕಳೆದುಹೋಗುವ ರೀತಿಯನ್ನು ಹೇಳುತ್ತಾರೆ.

ಸಂಬಂಧಿನೋಸ್ತಯೋರ್ನಾಸ್ತಿ ನಿವೃತ್ತಿಃ ಸಹಜಸ್ಯ ತು
ಕರ್ಮಕ್ಷಯಾತ್ಪ್ರಬೋಧಾಚ್ಚ ನಿವರ್ತೇತೇ ಕ್ರಮಾದುಭೇ ॥ ೯ ॥

ತಯೋಃ = ಹೀಗೆ ಮೂರು ಬಗೆಯಾದ ತಾದಾತ್ಮ್ಯ ಸಂಬಂಧವುಳ್ಳ ; ಸಂಬಂಧಿನೋಃ = ಸಂಬಂಧಿಗಳ (ತಾದಾತ್ಮ್ಯ ಸಂಬಂಧಗಳಲ್ಲಿ); ಸಹಜಸ್ಯ = ಸಹಜವಾದ ತಾದಾತ್ಮ್ಯದ ಎಂದರೆ ಚಿದಾಭಾಸ ಅಹಂಕಾರಗಳ ತಾದಾತ್ಮ್ಯದ; ನಿವೃತ್ತಿಃ = ನಿವೃತ್ತಿಯು ; ನಾಸ್ತಿ = (ವ್ಯವಹಾರದಲ್ಲಿ) ಇರುವುದಿಲ್ಲ ; ಉಭೇ = ಮತ್ತೆರಡೂ ; ಕ್ರಮಾತ್ = ಕ್ರಮವಾಗಿ ; ಕರ್ಮಕ್ಷಯಾತ್ = ಕರ್ಮವು ಸವೆಯುವುದರಿಂದಲೂ ; ಚ = ಮತ್ತು ; ಪ್ರಬೋಧಾತ್ = ಜ್ಞಾನದಿಂದಲೂ; ನಿವರ್ತೇತೇ = ಹೋಗುತ್ತವೆ.

ಈ ಮೂರು ಬಗೆಯ ತಾದಾತ್ಮ್ಯಗಳಲ್ಲಿ ಸಹಜವಾದದ್ದು, ಎಂದರೆ ಚಿದಾಭಾಸ ಸಾಕ್ಷಿಗಳ ತಾದಾತ್ಮ್ಯವು ವ್ಯವಹಾರದಲ್ಲಿ ಹೋಗುವುದೇ ಇಲ್ಲ. ವ್ಯವಹಾರವಿರುವವರೆಗೆ ಎಂದರೆ ತ್ವಂ, ಅಹಂ ಎಂಬ ವಿಷಯವಿಷಯಿಭೇದದ ಅನುಭವವಿರುವವರೆಗೆ ಇದ್ದೇ ಇರುತ್ತದೆ.

ಮತ್ತೆ ಎರಡರಲ್ಲಿ ಕರ್ಮದಿಂದುಂಟಾದ ಚಿದಾಭಾಸ ದೇಹಗಳ ತಾದಾತ್ಮ್ಯವು ಕರ್ಮವು ಸವೆದಾಗ ಇಲ್ಲವಾಗುತ್ತದೆ. ಪ್ರತಿನಿತ್ಯವೂ ಜಾಗ್ರತ್ ಸ್ವಪ್ನಾವಸ್ಥೆಗಳಲ್ಲಿ ಅನುಭವಿಸುವ ಕರ್ಮಗಳು ಸವೆದಾಗ ಸುಷುಪ್ತಿಯಲ್ಲಿ ಈ ತಾದಾತ್ಮ್ಯದ ಅನುಭವವಿಲ್ಲದಿರುವುದೇ ಇದಕ್ಕೆ ಪ್ರಮಾಣ.

ಭ್ರಾಂತಿಯಿಂದುಂಟಾದ ಅಹಂಕಾರ ಚಿದಾಭಾಸಗಳ ತಾದಾತ್ಮ್ಯವು ಮೂರನೆಯದು. ರಜ್ಜುಸರ್ಪಭ್ರಾಂತಿಯಲ್ಲಿ, ಅಧಿಷ್ಠಾನವಾದ ಹಗ್ಗದ

CC-O. In Public Domain. Digitized by eGangotri

ಸ್ವರೂಪದ ಅಜ್ಞಾನದಿಂದ ಉಂಟಾದ ಸರ್ಪಭ್ರಾಂತಿಯಂತೆ ಅಧಿಷ್ಠಾನವಾದ ಬ್ರಹ್ಮದ ಜ್ಞಾನವಾದಾಗ ಈ ತಾದಾತ್ಮ್ಯವೂ ಹೋಗುವುದು. ॥ ೯ ॥

ಸಂಕ್ಷೇಪವಾಗಿ ಅವಸ್ಥಾತ್ರಯದ ಸ್ವರೂಪವನ್ನೂ ದೇಹದ ಅಚೇತನತೆಯನ್ನೂ ತೋರಿಸುತ್ತಾರೆ :

ಅಹಂಕಾರಲಯೇ ಸುಪ್ತೌ ಭವೇದ್ದೇಹೋಽಪ್ಯಚೇತನಃ
ಅಹಂಕಾರವಿಕಾಸಾರ್ಧಃ ಸ್ವಪ್ನಃ ಸರ್ವಸ್ತು ಜಾಗರಃ ॥ ೧೦ ॥

ಸುಪ್ತೌ = ಸುಷುಪ್ತಿಯಲ್ಲಿ, ಗಾಢನಿದ್ರೆಯಲ್ಲಿ ; ಅಹಂಕಾರಲಯೇ = ಅಹಂಕಾರವು ಅಡಗಿಹೋದಾಗ ; ದೇಹೋಽಪಿ = ದೇಹವೂ ಕೂಡ ; ಅಚೇತನಃ = ಜೈತನ್ಯವಿಲ್ಲದ್ದಾಗಿ, ಅರಿವಿಲ್ಲದ್ದಾಗಿ; ಭವೇತ್ = ಆಗುವುದು ; ಅಹಂಕಾರ ವಿಕಾಸಾರ್ಧಃ = ಅಹಂಕಾರವು ಅರ್ಧ ಅರಳಿರುವ ಸ್ಥಿತಿಯು ; ಸ್ವಪ್ನಃ = ಕನಸು ; ಸರ್ವಸ್ತು = ತುಂಬ ಅರಳಿರುವ ಸ್ಥಿತಿಯು ; ಜಾಗರಃ = ಎಚ್ಚರವು.

ಆ ದಿವಸ ಅನುಭವಿಸಬೇಕಾದ ಸ್ಥೂಲ ಸೂಕ್ಷ್ಮಕರ್ಮಗಳು ಸವೆದಾಗ ಅಹಂಕಾರವು ತನ್ನ ಕಾರಣವಾದ ಅವಿದ್ಯೆಯಲ್ಲಿ ಅಡಗಿರುತ್ತದೆ. ಈ ಸ್ಥಿತಿಯು ಸುಷುಪ್ತಿ ಅಥವಾ ಗಾಢ ನಿದ್ರೆ. ಹಿಂದೆ ಅಹಂಕಾರದ ಸಂಬಂಧದಿಂದ ಎಲ್ಲ ಕೆಲಸವನ್ನೂ ಮಾಡುತ್ತಿದ್ದ ದೇಹವು, ಆ ಸಂಬಂಧವಿಲ್ಲದ ಈ ಅವಸ್ಥೆಯಲ್ಲಿ ಚೈತನ್ಯರಹಿತವಾಗಿ ನಿಶ್ಚೇಷ್ಟವಾಗಿ ಇರುತ್ತದೆ.

ಅಹಂಕಾರವು ಅರ್ಧವಿಕಾಸವಾಗಿರುವ ಅಥವಾ ಅರ್ಧ ಅರಳಿರುವ ಸ್ಥಿತಿ ಕನಸು. ಅರ್ಧ ಅರಳಿರುವುದು ಎಂದರೆ, ಜಾಗ್ರದವಸ್ಥೆಯ ಅನುಭವಗಳಿಂದಾದ ಸಂಸ್ಕಾರಗಳನ್ನು ಮಾತ್ರ ವಿಷಯಗಳಾಗಿ ಮಾಡಿಕೊಂಡು, ದೇಹದ ಹೊರಗಿರುವ ವಿಷಯಗಳನ್ನು ಇಂದ್ರಿಯಗಳ ಮೂಲಕ ಗ್ರಹಿಸದೆ ಇರುವ ಸ್ಥಿತಿ. ಇದರಲ್ಲಿ ಸ್ಥೂಲ ಶರೀರಾಭಿಮಾನ, ತಾನು ಸ್ಥೂಲ ಶರೀರವೆಂಬ ತಾದಾತ್ಮ್ಯ ಇರುವುದಿಲ್ಲ.

ಅದೇ ಅಹಂಕಾರವು ಪೂರ್ಣವಾಗಿ ವಿಕಾಸವಾದಾಗ, ಅರಳಿದಾಗ, ಇಂದ್ರಿಯಗಳ ಮೂಲಕ ಬಾಹ್ಯ (ಹೊರಗಿನ) ವಿಷಯಗಳ ಅನುಭವವನ್ನು ಪಡೆದುಕೊಳ್ಳುತ್ತದೆ. ಇದು ಎಚ್ಚರ ಅಥವಾ ಜಾಗ್ರದವಸ್ಥೆ. ಈ ಸ್ಥಿತಿಯಲ್ಲಿ ತಾನು ಶರೀರವೆಂಬ ಸ್ಥೂಲದೇಹಾಭಿಮಾನವಿರುತ್ತದೆ. ॥ ೧೦ ॥

ಕರ್ತೃವಾದ ಅಹಂಕಾರದ (ಅಂತಃಕರಣದ) ಅವಸ್ಥೆಗಳನ್ನು ಹೇಳಿ, ಆದ

Sri Vidyabharathi Book Centre, Sringeri

CC-O. In Public Domain. Digitized by eGangotri

ಉಪಕರಣವಾಗಿ (ಸಾಧನವಾಗಿ) ವರ್ತಿಸುವುದನ್ನೂ ಅದರ ಕ್ರಿಯೆಯನ್ನೂ ಹೇಳುತ್ತಾರೆ :

ಅಂತಃಕರಣವೃತ್ತಿಶ್ಚ ಚಿತಿಚ್ಛಾಯೈಕ್ಯಮಾಗತಾ
ವಾಸನಾಃ ಕಲ್ಪಯೇತ್ ಸ್ವಪ್ನೇ ಬೋಧೇಽಕ್ಷೈರ್ವಿಷಯಾನ್ಬಹಿಃ॥೧೧॥

ಅಂತಃಕರಣವೃತ್ತಿಶ್ಚ = ವೃತ್ತಿರೂಪವಾದ ಅತಃಕರಣವೂ ಕೂಡ ; ಚಿತಿಚ್ಛಾಯೈಕ್ಯಮಾಗತಾ = ಚಿದಾಭಾಸದೊಡನೆ ಒಂದುಗೂಡಿ ; ಸ್ವಪ್ನೇ = ಕನಸಿನಲ್ಲಿ ; ವಾಸನಾಃ = ವಾಸನೆಗಳನ್ನೂ (ಸಂಸ್ಕಾರಗಳನ್ನೂ) ; ಬೋಧೇ = ಎಚ್ಚರದಲ್ಲಿ ; ಬಹಿಃ = ಹೊರಗೆ; ಅಕ್ಷೈಃ = ಇಂದ್ರಿಯಗಳಿಂದ; ವಿಷಯಾನ್ = ವಿಷಯಗಳನ್ನೂ ; ಕಲ್ಪಯೇತ್ = ಉಂಟುಮಾಡುತ್ತದೆ.

ಚಿದಾಭಾಸದೊಡನೆ ತಾದಾತ್ಮ್ಯವನ್ನು ಪಡೆದ ವೃತ್ತಿರೂಪವಾದ ಅಂತಃಕರಣವೇ ಕನಸಿನಲ್ಲಿ ವಿಷಯಗಳನ್ನೂ ಎಚ್ಚರದಲ್ಲಿ ಇಂದ್ರಿಯಗಳಿಂದ ಬಾಹ್ಯ ವಿಷಯಗಳನ್ನೂ ಕಲ್ಪಿಸುತ್ತದೆ.

ಚಿದಾಭಾಸದೊಡನೆ ಬೆರೆತು ಒಂದೇ ಆಗಿ ಕಾಣುತ್ತಿದ್ದರೂ, ಅದರ ಸಾಧನ ಅಥವಾ ಉಪಕರಣದಂತಿದೆ ವೃತ್ತಿರೂಪವಾದ ಅಂತಃಕರಣ. ವೃತ್ತಿ ರೂಪವೆಂದರೆ : 'ನಾನು, ಇದು' ಎನ್ನುವ ಆಕಾರದಿಂದ ಪ್ರಾರಂಭವಾಗಿ ಅನಂತ ವಾದ ಎಲ್ಲ ರೀತಿಗಳಲ್ಲಿಯೂ ವರ್ತಿಸುತ್ತಿರುವುದು. ಇಂಥ ಅಂತಃಕರಣವೇ ಅವಸ್ಥಾಂತರಗಳಲ್ಲಿ ಮೇಲೆ ಹೇಳಿದ ವಿಷಯಗಳಾಗಿ ತೋರುವ ವಾಸನೆಗಳನ್ನೂ ಕಲ್ಪಿಸುತ್ತದೆ; ಎಚ್ಚರದಲ್ಲಿ ಇಂದ್ರಿಯಗಳನ್ನೂ ಅವುಗಳ ದ್ವಾರಾ ಗ್ರಹಿಸುವ ಬಾಹ್ಯ ವಿಷಯಗಳನ್ನೂ ಅದೇ ಉಂಟುಮಾಡುತ್ತದೆ.

ಆದರೆ ಈಶ್ವರ ಸೃಷ್ಟಿಯಾದ ಪ್ರಪಂಚವನ್ನು ಅಂತಃಕರಣದಿಂದ ಅಥವಾ ಮನಸ್ಸಿನಿಂದ ಉಂಟಾದದ್ದು ಎನ್ನುವುದು ತಪ್ಪಲ್ಲವೇ ? ಎಂದರೆ :

ಪ್ರಪಂಚವು ಸ್ವರೂಪತಃ ಈಶ್ವರನ ಸೃಷ್ಟಿಯೇ. ಆದರೂ ಆದಕ್ಕೂ ನಮಗೂ ಸಂಬಂಧವನ್ನು ತಂದಿರುವ ಭೋಗ್ಯತ್ವ ದೃಷ್ಟಿಯು ಅಥವಾ ವಿಷಯತ್ವ ದೃಷ್ಟಿಯು ಅಂತಃಕರಣದ ಕಲ್ಪನೆಯೇ ; ಆದ್ದರಿಂದ ಪ್ರಪಂಚವನ್ನು ಅಂತಃ ಕರಣದ ಕಲ್ಪನೆ ಎನ್ನುವುದು ತಪ್ಪಲ್ಲ. ॥೧೧॥

ಅಂತಃಕರಣವನ್ನು ಅದರ ವೃತ್ತಿಗಳಿಗೆ, ಕೆಲಸ (functions ಗಳಿಗೆ,ಅನು ಗುಣವಾಗಿ ಮನಸ್ಸು ಅಹಂಕಾರಗಳೆಂದು ವಿಂಗಡಿಸಿ, ಒಂದನ್ನು ಕರಣವೆಂದೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತೊಂದನ್ನು ಕರ್ತೃವೆಂದೂ ಹೇಳಿತ್ತು. ಆದರಲ್ಲಿಯೇ ಚೈತನ್ಯ ಬೆಳಕಿ ನಿಂದಾಗುವ ತೋರಿಕೆಯನ್ನು ಬುದ್ಧಿ ಎಂದು ನಿರ್ದೇಶಿಸಿ ಅದಕ್ಕೆ ಆ ಮುಖ್ಯ ಕರ್ತೃತ್ವವನ್ನು ಹೇಳಿ ಅಹಂಕಾರವೂ ಕರಣವಾಗುವುದೆಂದೂ ಹೇಳಿತ್ತು. ಇಂಥ ವಿಭಾಗಕ್ಕೆ ಮುಂದೆ ಇರುವ ಲಿಂಗಶರೀರವೆಂಬ ದ್ರವ್ಯದ ಸ್ವರೂಪವನ್ನು ಹೇಳು ತ್ತಾರೆ :

ಮನೋ ऽಹಂಕೃತ್ಯುಪಾದಾನಂ ಲಿಂಗಮೇಕಂ ಜಡಾತ್ಮಕಮ್
ಅವಸ್ಥಾತ್ರಯಮನ್ವೇತಿ ಜಾಯತೇ ಮ್ರಿಯತೇ ತಥಾ ॥ ೧೧ ॥

ಮನೋ ऽಹಂಕೃತ್ಯುಪಾದಾನಂ = ಮನಸ್ಸು ಅಹಂಕಾರ ಎರಡಕ್ಕೂ ಉಪಾದಾನ ಕಾರಣವಾದ ; ಏಕಂ = ಒಂದೇ ; ಲಿಂಗಂ = ಲಿಂಗಶರೀರವು ; ಜಡಾತ್ಮಕಂ = ಆಜೇತನ ಸ್ವರೂಪವಾದದ್ದು ; (ಆದರೂ ಚಿದಾಭಾಸದ ಸಂಪರ್ಕ ದಿಂದ) ಅವಸ್ಥಾತ್ರಯಂ = ಎಚ್ಚರ ಕನಸು ನಿದ್ದೆಗಳೆಂಬ ಮೂರು ಅವಸ್ಥೆ ಗಳನ್ನೂ ; ಅನ್ವೇತಿ = ಹೊಂದುತ್ತದೆ. ತಥಾ = ಹಾಗೆಯೇ ; ಜಾಯತೇ = ಹುಟ್ಟುತ್ತದೆ ; ಮ್ರಿಯತೇ = ಸಾಯುತ್ತದೆ.

ಮನಸ್ಸು ಅಹಂಕಾರ ಎಂಬುದಕ್ಕೆ ಉಪಾದಾನ ಕಾರಣವಾದ ಒಂದು ಪದಾರ್ಥವು ಲಿಂಗಶರೀರವು. ಅದು ಸ್ವಭಾವವಾಗಿ ಜಡವಾಗಿದ್ದರೂ ಚಿದಾ ಭಾಸದ ಸಂಪರ್ಕದಿಂದ ಸಚೇತನವಾಗಿ ತೋರುತ್ತದೆ. ಅವಸ್ಥಾತ್ರಯಗಳೂ ಹುಟ್ಟು ಸಾವುಗಳೂ ಉಂಟಾಗುವುದು ಅದಕ್ಕೇ.

ಶಾಸ್ತ್ರದಲ್ಲಿ ಬೇರೆಯ ಕಡೆ ಲಿಂಗಶರೀರವನ್ನು ಐದು ಜ್ಞಾನೇಂದ್ರಿಯ ಗಳು ಐದು ಕರ್ಮೇಂದ್ರಿಯಗಳು ಐದು ಭೂತಸೂಕ್ಷ್ಮಗಳು ಮನಸ್ಸು ಮತ್ತು ಬುದ್ಧಿ ಹೀಗೆ ಹದಿನೇಳು ಅಂಶಗಳಿಂದ ಕೂಡಿದ್ದು ಎಂದು ಹೇಳಿದೆ. ಅದನ್ನೇ ಇಲ್ಲಿ ಮನಸ್ಸು ಅಹಂಕಾರಗಳ ಉಪಾದಾನ ಕಾರಣವೆನ್ನುವುದು ವಿರೋಧವಾಗ ಲಿಲ್ಲವೇ ? ಎಂದರೆ : ಅಲ್ಲಿ ಲಿಂಗಶರೀರದ ಅವಯವಗಳನ್ನು ಬಿಡಿಯಾಗಿ ಹೆಸ ರಿಸ ಬೇಕಾದ ಸಂದರ್ಭದಲ್ಲಿ ಆ ರೀತಿಯಾಗಿ ಹೇಳಿದೆ. ಇಲ್ಲಿ ಹೇಳಬೇಕಾಗಿರು ವುದು ಏಕೀಭೂತವಾದ—ಒಂದುಗೂಡಿದ—ಅವಯವಿಯ ಸ್ವರೂಪವನ್ನು. ಆದ್ದರಿಂದ ಅವುಗಳಲ್ಲಿ ಮುಖ್ಯವಾದ ಎರಡನ್ನುಮಾತ್ರ ಹೇಳಿ ಅವ್ರಗಳಿಗೆ ಉಪಾ ದಾನವೆಂದಿದೆ. ಇದರಿಂದ ಅವೆಲ್ಲಕ್ಕೂ ಉಪಾದಾನವಾದ ಒಂದೇ ಪದಾರ್ಥ ವನ್ನು ಹೇಳಿದೆ. ಹೀಗೆ ಹೇಳಬೇಕಾದ ವಿಷಯದ–ವಿವಕ್ಷಿತದ-ಭೇದದಿಂದ ಹೇಳುವ ರೀತಿ ಬೇರೆಯದಾಗಿದೆ. ಇದರಲ್ಲಿ ದೋಷ ಯಾವುದೂ ಇಲ್ಲ.

CC-O. In Public Domain. Digitized by eGangotri

ಇಂಥ ಲಿಂಗಶರೀರವು ಸ್ವರೂಪತಃ ಜಡವಾಗಿದ್ದರೂ ಚಿದಾಭಾಸದ ಪ್ರವೇಶದಿಂದ ಸಚೇತನವಾಗಿ ಕಾಣುತ್ತದೆ. ಪ್ರತಿದಿವಸವೂ ಆಗುವ ಅವಸ್ಥಾತ್ರಯಗಳೂ ಜನನ ಮರಣಗಳೂ ಆಗುವುದು ಇದಕ್ಕೇ. ॥ ೧೨ ॥

ಹೀಗೆ ಸಂಸಾರವೆಲ್ಲವನ್ನೂ ನಿರ್ವಹಿಸುತ್ತಿರುವ ಲಿಂಗಶರೀರದ ಸ್ವರೂಪವನ್ನು ಹೇಳಿದ ಮೇಲೆ ಅದಕ್ಕೂ ವಿರಾಡ್ರೂಪದವರೆಗಿನ ಎಲ್ಲ ಪ್ರಪಂಚಕ್ಕೂ ಮೂಲ ಕಾರಣವಾದ ಅವಿದ್ಯೆ, ಸಾಪೇಕ್ಷ ಜ್ಞಾನ, (Relative knowledge) ಅಥವಾ ಮಾಯೆಯ ವಿಷಯವನ್ನು ಅದರ ಶಕ್ತಿಯ ನಿರೂಪಣೆಯ ಮೂಲಕ ಹೇಳುತ್ತಾರೆ.

ಶಕ್ತಿದ್ವಯಂ ಹಿ ಮಾಯಾಯಾ ವಿಕ್ಷೇಪಾವೃತ್ತಿರೂಪಕಮ್
ವಿಕ್ಷೇಪಶಕ್ತಿರ್ಲಿಂಗಾದಿಬ್ರಹ್ಮಾಣ್ಡಾನ್ತಂ ಜಗತ್ ಸೃಜೇತ್ ॥೧೩॥

ಮಾಯಾಯಾಃ = ಮಾಯೆಯ ; ವಿಕ್ಷೇಪಾವೃತ್ತಿರೂಪಕಂ = ವಿಕ್ಷೇಪ ಎಂದರೆ (ಇಲ್ಲದುದನ್ನು) ಉಂಟುಮಾಡುವುದು, ಆವರಣ ಎಂದರೆ ಇದ್ದುದನ್ನು ಮುಚ್ಚಿ ಮರೆಮಾಡುವುದು, ಎಂಬ ರೂಪದ ; ಶಕ್ತಿದ್ವಯಂ = ಎರಡು ಶಕ್ತಿಗಳಿವೆ ಎಂಬುದು; ಹಿ = ಪ್ರಸಿದ್ಧ ; (ಅವುಗಳಲ್ಲಿ) ವಿಕ್ಷೇಪಶಕ್ತಿಃ = ವಿಕ್ಷೇಪ ಶಕ್ತಿಯು ; ಲಿಂಗಾದಿಬ್ರಹ್ಮಾಣ್ಡಾನ್ತಂ = ಲಿಂಗಶರೀರದಿಂದ ಮೊದಲುಗೊಂಡು ಬ್ರಹ್ಮಾಂಡದವರೆಗೆ ಇರುವ ; ಜಗತ್ = ಪ್ರಪಂಚವನ್ನು, ವಿಶ್ವವನ್ನು ; ಸೃಜೇತ್ = ಸೃಷ್ಟಿ ಮಾಡುತ್ತದೆ, ಉಂಟುಮಾಡುತ್ತದೆ. ॥ ೧೩ ॥

ಮಾಯೆಗೆ ವಿಕ್ಷೇಪ ಮತ್ತು ಆವರಣ ಎಂಬ ಎರಡು ಶಕ್ತಿಗಳಿವೆ ಎಂಬುದು ಪ್ರಸಿದ್ಧವಾಗಿದೆ. ಅವುಗಳಲ್ಲಿ ವಿಕ್ಷೇಪಶಕ್ತಿಯು ಇಲ್ಲದುದನ್ನು ಉಂಟುಮಾಡುವುದು ; ಲಿಂಗಶರೀರದಿಂದ ಮೊದಲುಗೊಂಡು ಬ್ರಹ್ಮಾಂಡದವರೆಗೆ ಇರುವ ವಿಶ್ವವೆಲ್ಲವನ್ನೂ ಈ ಶಕ್ತಿಯೇ ಸೃಷ್ಟಿ ಮಾಡುತ್ತದೆ, ಉಂಟುಮಾಡುತ್ತದೆ.

ವಾಸ್ತವವಾಗಿ ವಸ್ತು ಸ್ವರೂಪವು ಮರೆಯಾಗದಿದ್ದಾಗ ಬೇರೆಯ ರೂಪದ ಕಲ್ಪನೆಗೆ ಅವಕಾಶವೇ ಇರುವುದಿಲ್ಲ. ಹಗ್ಗದ ಸ್ವರೂಪ ಕಾಣದಿದ್ದ ಸ್ಥಿತಿಯಲ್ಲಿ ಮಾತ್ರ ಅದು ಹಾವಾಗಿಯೋ, ಭೂಥಿದ್ರವಾಗಿಯೋ, ಜಲರೇಖೆಯಾಗಿಯೋ ತೋರುವುದು ಸಾಧ್ಯ. ಆದ್ದರಿಂದ ಆವರಣ ಶಕ್ತಿಯನ್ನೇ ಮೊದಲು ಹೇಳಬೇಕಾಗಿತ್ತು. ಆದರೂ ಲೋಕಾನುಭವದಲ್ಲಿ ನಮಗೆ ಕಾಣು

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತಿರುವುದೆಲ್ಲ ವಿಕ್ಷೇಪದ ಕಾರ್ಯವೇ. ವಿಚಾರ ಮಾಡಿದಾಗ ಮಾತ್ರ ಆವರಣವಾದ ಮೇಲೆಯೇ ವಿಕ್ಷೇಪವು ಸಾಧ್ಯವಾಗುವುದು ಎಂಬ ಅರಿವು ಬರುತ್ತದೆ. ಆದ್ದರಿಂದಲೇ ಮೊದಲು ವಿಕ್ಷೇಪದ ವಿಷಯವನ್ನೇ ಹೇಳಿದೆ.

ವಿಕ್ಷೇಪವೆಂದರೆ ಅನೇಕ ಬಗೆಯಾಗಿ ಮಾಡುವುದು, ಅನೇಕ ಬಗೆಯಾಗಿ ತೋರುವುದು, ಅನೇಕ ಬಗೆಯಾಗಿ ಇರುವುದು ; ಇಂಥಾ ಶಕ್ತಿಯು ವಿಕ್ಷೇಪ ಶಕ್ತಿ. ॥ ೧೩ ॥

ಹೀಗೆ ವಿಕ್ಷೇಪ ಶಕ್ತಿಯ ಸ್ವರೂಪವನ್ನು ಹೇಳಿ, ಅದರ ಕಾರ್ಯವಾದ ಸೃಷ್ಟಿಯ ಸ್ವರೂಪದ ನಿರೂಪಣೆಯಿಂದ ಅದನ್ನು ಸ್ಪಷ್ಟಗೊಳಿಸುತ್ತಾರೆ.

ಸೃಷ್ಟಿರ್ನಾಮ ಬ್ರಹ್ಮರೂಪೇ ಸಚ್ಚಿದಾನಂದವಸ್ತುನಿ
ಅಬ್ಧೌ ಫೇನಾದಿವತ್ ಸರ್ವನಾಮರೂಪಪ್ರಸಾರಣಾ ॥ ೧೪ ॥

ಬ್ರಹ್ಮರೂಪೇ = ಬ್ರಹ್ಮರೂಪವಾದ, ಅನಂತ ಅಖಂಡ ರೂಪವಾದ ; ಸಚ್ಚಿದಾನಂದವಸ್ತುನಿ = ಸಚ್ಚಿದಾನಂದಸ್ವರೂಪವಾದ ವಸ್ತುವಿನಲ್ಲಿ ; ಅಬ್ಧೌ = ಸಮುದ್ರದಲ್ಲಿ ; ಫೇನಾದಿವತ್ = ನೊರೆ ಮುಂತಾದುವುಗಳಂತೆ ; ಸರ್ವನಾಮರೂಪಪ್ರಸಾರಣಾ = ಎಲ್ಲಾ ಹೆಸರುಗಳು ಮತ್ತು ರೂಪಗಳು ಕಾಣಿಸಿಕೊಳ್ಳುವುದು ; ಸೃಷ್ಟಿರ್ನಾಮ = ಸೃಷ್ಟಿ ಎಂಬುದು.

ಅಖಂಡಾನಂತ[1] ರೂಪವಾದ ಬ್ರಹ್ಮವೆಂಬ ಸಚ್ಚಿದಾನಂದವಸ್ತು[2]ವಿನಲ್ಲಿ ಎಲ್ಲ ನಾಮ[4] ರೂಪಗಳ[5] ಆವಿರ್ಭಾವ, ಕಾಣಿಸಿಕೊಳ್ಳುವುದೇ[6], ತೋರಿಕೆಯೇ, ಸೃಷ್ಟಿ ಎಂಬುದು. ॥ ೧೪ ॥

---

1. ಅನಂತವಾದ ತತ್ವದಲ್ಲಿ ಒಂದು (ಇದು) ಮತ್ತೊಂದು (ಅದು) ಎಂಬ ಭೇದ, ವಿಭಾಗ. ಇರುವುದಿಲ್ಲ; ಆದ್ದರಿಂದ ಅದು ಅಖಂಡವೇ.

2. ಇವು, ಬ್ರಹ್ಮದ ವಿಶೇಷಣಗಳಲ್ಲ; ಸತ್ ಚಿತ್ ಆನಂದಗಳು. ಸ್ವರೂಪವೇ.

3. ವಸ್ತು ಎಂದರೆ ಇರುವುದು. ಈ ಬ್ರಹ್ಮವು ಇಲ್ಲದ್ದು ಅಲ್ಲ ; ಶೂನ್ಯ (ಅವಸ್ತು) ವಲ್ಲ, ಇರುವುದೇ. ತಿಳಿವಳಿಕೆಗೆ ವಿಷಯಗಳಾದ ನಾಮ ರೂಪಗಳು ಸುಳ್ಳಾದರೂ (ಮಿಥ್ಯೆಯಾದರೂ), ಅವಕ್ಕೆ ಆಶ್ರಯವಾಗಿರುವ ತತ್ವವು ಯಾವಾಗಲೂ ಇರುವುದೇ. ವಸ್ತುವೇ.

4 ನಾಮ, ಹೆಸರು, ಇಂದ್ರಿಯಗಳಿಂದ ಅಥವಾ ಮನಸ್ಸಿನಿಂದ ಗ್ರಹಿಸಬಹುದಾದ ವಿಷಯಗಳನ್ನು ತಿಳಿಸುವ ಶಬ್ದ, ಸಂಕೇತ.

5. ರೂಪ, ಅಂಥ ಶಬ್ದದಿಂದ ಮನಸ್ಸು ಗ್ರಹಿಸುವ ವಿಷಯದ ಆಕಾರ.

6. ಈ ಉಪಮೆಯನ್ನು ಕೊಟ್ಟಿರುವುದು ಸೃಷ್ಟಿಯ ಹಿಂದಿನ ಚಲನೀಯತೆಯನ್ನು ತೋರಿಸು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ವಿಕ್ಷೇಪಶಕ್ತಿಯ ಮೂಲಕ ಮಾಯೆಯ ಸ್ವರೂಪವನ್ನು ಹೇಳಿ, ಆವರಣ ಶಕ್ತಿಯ ಮೂಲಕ ಅದನ್ನೇ ಮತ್ತೆ ಹೇಳುತ್ತಾರೆ :

ಅಂತರ್ದೃಗ್ದೃಶ್ಯಯೋರ್ಭೇದಂ ಬಹಿಶ್ಚಬ್ರಹ್ಮಸರ್ಗಯೋಃ
ಆವೃಣೋತ್ಯಪರಾ ಶಕ್ತಿಃ ಸಾ ಸಂಸಾರಸ್ಯಕಾರಣಮ್ ॥ ೧೫ ॥

ಅಪರಾ = (ಮಾಯೆಯ) ಮತ್ತೊಂದು ; ಶಕ್ತಿಃ = ಶಕ್ತಿಯು (ಆವರಣ ಶಕ್ತಿಯು); ಅಂತಃ = ಒಳಗೆ ; ದೃಗ್‌ದೃಶ್ಯಯೋಃ = ನೋಡುವುದು ಮತ್ತು ಕಾಣಿಸುವುದು, ವಿಷಯೀ ಮತ್ತು ವಿಷಯ, ಇವುಗಳ; ಭೇದಂ = ಭೇದವನ್ನೂ; ಚ = ಮತ್ತು ; ಬಹಿಃ = ಹೊರಗೆ ; ಬ್ರಹ್ಮಸರ್ಗಯೋಃ = (ಕೇವಲವಾದ) ಬ್ರಹ್ಮ ಮತ್ತು (ಕಾರ್ಯವಾದ) ಸೃಷ್ಟಿ ಇವುಗಳ (ಭೇದವನ್ನೂ); ಆವೃಣೋತಿ = ಮುಚ್ಚುತ್ತದೆ, ಮರೆಮಾಡುತ್ತದೆ ; ಸಾ = ಆ ಆವರಣಶಕ್ತಿಯೇ ; ಸಂಸಾರಸ್ಯ = ಸಂಸಾರದ ; ಕಾರಣಂ = ಕಾರಣವು.

ಆವರಣ ಶಕ್ತಿಯೆಂಬ ಮಾಯೆಯ ಮತ್ತೊಂದು ಶಕ್ತಿಯು, ಒಳಗೆ ವಿಷಯಿವಿಷಯಗಳ (ವ್ಯಾವಹಾರಿಕ) ಭೇದವನ್ನು[1] ಮುಚ್ಚುತ್ತದೆ ; ಹಾಗೆಯೇ

ವುದಕ್ಕೆ : ಸಮುದ್ರವು ನೀರಲ್ಲದೆ ಬೇರೆ ಏನೂ ಅಲ್ಲ. ಆದರಲ್ಲಿ ಏಳುವ ಅಲೆಗಳು ಅವುಗಳ ಮೇಲಿರುವ ನೊರೆ ಇವೆಲ್ಲವೂ ನೀರೇ. ನೀರಾಗಿ ಎಲ್ಲವೂ ಒಂದೇ ಆಗಿದ್ದರೂ ಸಮುದ್ರ ಬೇರೆ, ಅಲೆಗಳು ಬೇರೆ, ನೊರೆಯೂ ಬೇರೆ, ಎಂಬ ವ್ಯವಹಾರವು ಇದ್ದೇ ಇದೆ. ಇವನ್ನು ಸಮುದ್ರವೇ ಸಮುದ್ರಕ್ಕಿಂತ ಬೇರೆಯಲ್ಲ ಎಂದು ಹೇಳುವುದೂ ಆಗುವುದಿಲ್ಲ. ಬೇರೆ ಎಂದು ಹೇಳುವುದಕ್ಕೂ ಆಗುವುದಿಲ್ಲ. ಆದುದರಿಂದಲೇ ಬೇರೆಯಲ್ಲದಿದ್ದರೂ ಬೇರೆಯಾಗಿ ತೋರುತ್ತವೆ; ಈ ತೋರಿಕೆಯನ್ನೇ ಸುಳ್ಳು, ಮಿಥ್ಯಾ ಎಂದು ಹೇಳುವುದು ಸೃಷ್ಟಿಯಾದುದು ವಿನ್ನಿಸಿಕೊಳ್ಳುವ ಜಗತ್ತೂ ಹೀಗೆಯೇ. ಆದಕ್ಕೆ ಕಾರಣವಾದ ಬ್ರಹ್ಮದಿಂದ ಬೇರೆಯಲ್ಲದಿದ್ದರೂ ಬೇರೆಯಾಗಿ ತೋರುತ್ತಿದೆ, ಈ ತೋರಿಕೆಯೂ ಸುಳ್ಳೇ, ಮಿಥ್ಯೆಯೇ.

1. ಅಹಂಕಾರದಿಂದ ಸ್ಥೂಲದೇಹದವರೆಗೆ ಎಲ್ಲ ಪದಾರ್ಥಗಳೂ ಕಾಣುವವೇ. ದೃಶ್ಯಗಳೇ, ವಿಷಯಗಳೇ. ಸಾಕ್ಷಿಯೊಂದೇ ಎಂದಿಗೂ ವಿಷಯವಾಗದ, ಯಾವುದಕ್ಕೂ ಕಾಣದ ಆದರೂ ಎಲ್ಲವನ್ನೂ ನೋಡುವ ವಿಷಯೀ, ದೃಕ್. ಇದು ವ್ಯವಹಾರದಲ್ಲಿಯೇ ಸಿದ್ಧವಾಗಿದ್ದರೂ ಈ ಭೇದವನ್ನು ಮರೆತು, ವಿಷಯಗಳಾದ ದೇಹ ಇಂದ್ರಿಯ ಮನಸ್ಸು, ಅಹಂಕಾರ ಇವುಗಳೊಂದೊಂದನ್ನೂ ವಿಷಯಿಯಾದ 'ನಾನು' ಎಂದುಕೊಳ್ಳುವ ಭ್ರಮೆಯಿಂದಲೇ ವ್ಯವಹಾರವೆಲ್ಲ ನಡೆಯುತ್ತಿದೆ. ಹೀಗೆ ವ್ಯವಹಾರಸಿದ್ಧವಾದ ಭೇದವನ್ನು ಮರೆಮಾಡಿರುವುದು ಮಾಯೆಯ ಆವರಣ ಶಕ್ತಿಯೇ.

CC-O. In Public Domain. Digitized by eGangotri

ಈ ಶಕ್ತಿಯೇ ಹೊರಗೆ ಬ್ರಹ್ಮ ಸೃಷ್ಟಿಗಳ[1] ಭೇದವನ್ನೂ ಮರೆಮಾಡುತ್ತದೆ. ಈ ಬಗೆಯ ಮರೆಮಾಚುವಿಕೆಯೇ ವಿಕ್ಷೇಪಶಕ್ತಿಯಿಂದ ಸೃಷ್ಟಿಯುಂಟಾಗುವುದಕ್ಕೂ ಕೊನೆಗಾಣದ ಚಲನೆಯ ರೂಪವಾದ ಸಂಸಾರಕ್ಕೂ, ಕಾರಣವಾಗಿದೆ. ॥ ೧೫ ॥

ಹೀಗೆ ಈ ಎರಡು ಶಕ್ತಿಗಳನ್ನೇ ರೂಪವಾಗಿ ಉಳ್ಳ ಮಾಯೆಯನ್ನು ತಿಳಿಸಿದ್ದಾಯಿತು. ಈಗ 'ಮನೋಹಂಕೃತ್ಯಪಾದಾನಂ' ಎಂಬ ಹನ್ನೆರಡನೆಯ ಶ್ಲೋಕದಲ್ಲಿ ಸಾಮಾನ್ಯವಾಗಿ ಹೇಳಿದ್ದ ಲಿಂಗದೇಹದ ವಿಷಯವನ್ನು ವಿಶೇಷವಾಗಿ ಹೇಳುತ್ತಾರೆ :

ಸಾಕ್ಷಿಣಃ ಪುರತೋ ಭಾತಂ ಲಿಂಗಂ ದೇಹೇನ ಸಂಯುತಮ್
ಚಿತಿಚ್ಛಾಯಾಸಮಾವೇಶಾತ್ ಜೀವಃ ಸ್ಯಾತ್ ವ್ಯಾವಹಾರಿಕಃ ॥ ೧೬ ॥

ಚಿತಿಚ್ಛಾಯಾ ಸಮಾವೇಶಾತ್ = ಚಿದಾಭಾಸವು ಒಳಹೊಕ್ಕಿರುವುದರಿಂದ ; ಸಾಕ್ಷಿಣಃ = ಸಾಕ್ಷಿ ಚೈತನ್ಯದ ; ಪುರತಃ = ಮುಂದೆ, ಎದುರಿಗೆ ; ದೇಹೇನ = ಸ್ಥೂಲದೇಹದೊಡನೆ ; ಸಂಯುತಂ = ಕೂಡಿಕೊಂಡು, ಒಂದಾಗಿ; ಭಾತಂ = ಕಾಣುತ್ತಿರುವ ; ಲಿಂಗಂ = ಲಿಂಗಶರೀರವು; ವ್ಯಾವಹಾರಿಕಃ = ವ್ಯವಹಾರದಲ್ಲಿರುವ ; ಜೀವಃ = ಜೀವವು; ಸ್ಯಾತ್ = ಆಗಿದೆ.

ಚಿದಾಭಾಸವು ಒಳಹೊಕ್ಕಿರುವುದರಿಂದ[2] ಸಾಕ್ಷಿಚೈತನ್ಯದ ಎದುರಿಗೆ[3]

---

1. ಸಚ್ಚಿದಾನಂದ ಸ್ವರೂಪವಾದ ಬ್ರಹ್ಮವು ಕೇವಲವು, ಯಾವುದಕ್ಕೂ ಯಾವ ರೀತಿಯಾಗಿಯೂ ಸಂಬಂಧವಿಲ್ಲದ್ದು. ಜ್ಞಾನ (ಚಿತ್) ಸ್ವರೂಪವಾದ ಇದು ಯಾವಾಗಲೂ ಎಲ್ಲವನ್ನೂ ನೋಡಬಲ್ಲ ದೃಕ್, ವಿಷಯೀ, ಅದನ್ನು ನೋಡುವುದು ಮತ್ಯಾವುದೂ ಇಲ್ಲ. ಕಾರ್ಯರೂಪವಾಗಿ ಕಲ್ಪಿತವಾಗಿರುವ ಪ್ರಪಂಚ ಅಥವಾ ಸೃಷ್ಟಿಯೂ ಇದರ ಕಾರಣವಾಗಿ ಕಲ್ಪಿತವಾಗಿರುವ ಮಾಯೆ ಅಥವಾ ಈಶ್ವರನೂ ದೃಶ್ಯದಲ್ಲಿ ಸೇರಿದುವೇ, ಜ್ಞಾನವಿಷಯಗಳೇ ; ಹೀಗೆ ವ್ಯವಹಾರದಲ್ಲಿಯೇ ಕಾಣುತ್ತಿರುವ ಭೇದವನ್ನು ಮರೆಪಾಡಿ ಕಾರ್ಯವಾದ ಸೃಷ್ಟಿಯೂ, ಕಾರಣನಾದ ಈಶ್ವರ ಅಥವಾ ಮಾಯೆಯೂ,ಕೇವಲವಾದ ಬ್ರಹ್ಮಕ್ಕೆ ಅಭಿನ್ನವೆಂಬ ಭ್ರಾಂತಿಯನ್ನುಂಟುಮಾಡಿ, ಅದರ ಮೂಲಕ ಸಂಸಾರಕ್ಕೆ ಕಾರಣವಾಗಿರುವುದೂ ಮಾಯೆಯ ಆವರಣ ಶಕ್ತಿಯೇ.

2. ಲಿಂಗದೇಹದಲ್ಲಿ ಒಳಹೊಕ್ಕಿರುವುದರಿಂದ ; ಇದರಿಂದಲೇ ಜಡವಾದ ಲಿಂಗದೇಹವು ಸಚೇತನವಾಗಿ ತೋರುವುದು.

3. ಆ ಸಾಕ್ಷಿಚೈತನ್ಯದ ಕಾರ್ಯದಂತೆ, ಅದರಿಂದ ಉಂಟಾದುದರಂತೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ಥೂಲ ದೇಹದೊಡನೆ ಒಂದಾಗಿ[1] ಕಾಣುತ್ತಿರುವ[2] ಲಿಂಗದೇಹವು ವ್ಯವಹಾರದಲ್ಲಿರುವ[3] ಜೀವವಾಗಿದೆ. ॥ ೧೬ ॥

ಇಂಥ ವ್ಯಾವಹಾರಿಕ ಜೀವವು ಸಂಸಾರವೆಲ್ಲವನ್ನೂ ನಡೆಸುತ್ತಿದ್ದರೂ ಕೂಡ, ಮೋಕ್ಷದಲ್ಲಿ ಇಲ್ಲವಾಗುವುದರಿಂದ, ಸುಳ್ಳು (ಮಿಥ್ಯೆ) ಆಯಿತು; ಇದಕ್ಕೆ ಮೋಕ್ಷ ಸಾಧ್ಯವಿಲ್ಲ. ಸಾಕ್ಷಿಯು ನಿತ್ಯಮುಕ್ತಸ್ವರೂಪವಾದುದರಿಂದ ಅದಕ್ಕೆ ಮೋಕ್ಷ ಬೇಕಿಲ್ಲ. ಮೋಕ್ಷಕ್ಕೆ ಅಧಿಕಾರಿಯಾದ ಮತ್ತೆ ಯಾವ ಪದಾರ್ಥವೂ ಇಲ್ಲ. ಆದ್ದರಿಂದ ಮೋಕ್ಷ ಶಾಸ್ತ್ರವೆಲ್ಲವೂ ವ್ಯರ್ಥವಾಗುವುದು ಎಂಬ ಸಂದೇಹಕ್ಕೆ ಸಮಾಧಾನ ಹೇಳುತ್ತಾರೆ :

ಅಸ್ಯ ಜೀವತ್ವಮಾರೋಪಾತ್ ಸಾಕ್ಷಿಣ್ಯಪ್ಯವಭಾಸತೇ
ಆವೃತೌ ತು ವಿನಷ್ಟಾಯಾಂ ಭೇದೇ ಭಾತೇಽಪಯಾತಿ ಚ ॥ ೧೭ ॥

ಅಸ್ಯ = ಈ ವ್ಯಾವಹಾರಿಕ ಜೀವದ ; ಜೀವತ್ವಂ = ಜೀವತ್ವವು, ಜೀವಧರ್ಮವು ; ಆರೋಪಾತ್ = ತಪ್ಪುತಿಳಿವಳಿಕೆಯಿಂದ ; ಸಾಕ್ಷಿಣ್ಯಪಿ = ಸಾಕ್ಷಿಯಲ್ಲಿಯೂ ಕೂಡ ; ಅವಭಾಸತೇ = ತೋರಿ ಬರುತ್ತದೆ. ತು = ಆದರೆ; ಆವೃತೌ = (ತಪ್ಪುತಿಳಿವಳಿಕೆಯನ್ನು ಉಂಟುಮಾಡಿದ) ಆವರಣವು, ಮರೆಯು; ವಿನಷ್ಟಾಯಾಂ = ಹೋದಾಗ, ಇಲ್ಲವಾದಾಗ ; ಭೇದೇ = (ಸಾಕ್ಷಿಗೂ ವ್ಯಾವಹಾರಿಕ ಜೀವಕ್ಕೂ ಇರುವ) ಭೇದವು ; ಭಾತೇ = ಸ್ಪಷ್ಟವಾಗಿ ಕಂಡಾಗ ; ಅಪಯಾತಿ ಚ = ತಾನೂ ಹೋಗಿಬಿಡುತ್ತದೆ.

---

1. ಎರಡೂ ಒಂದಾಗಿಯೇ ಕಾಣುತ್ತಿರುವುದು. ಇವುಗಳ ಭೇದವು ವಿಚಾರದಿಂದಲೇ ತಿಳಿಯಬಹುದಾದದ್ದು.

2. ಇದೂ ತೋರಿಕೆಯೇ. ವಾಸ್ತವವಲ್ಲ.

3. ವಿಷಯಿ ವಿಷಯ ಎಂಬುದರಿಂದ ಮೊದಲಾದ ಎಲ್ಲ ವ್ಯವಹಾರವೂ ಇದರಿಂದಲೇ ನಡೆಯುತ್ತಿದೆ. ಇದು ಅನಿರ್ವಚನೀಯವಾದ ಮಾಯೆಯ ಕಾರ್ಯ ಎಂದರೆ. ಆದಕ್ಕೆ ಮಾಯೆಯೇ ಕಾರಣ ಮತ್ತು ಆ ಮಾಯೆಯು ಸ್ವರೂಪವೇನೆಂದು ಹೇಳುವುದೂ ಸಾಧ್ಯವಿಲ್ಲ. ಸಚ್ಚಿದಾನಂದಸ್ವರೂಪವಾದ ಬ್ರಹ್ಮ ಆತ್ಮ ಭೇದವಿಲ್ಲದಿರುವಿಕೆಯಾದ ಮೋಕ್ಷದಲ್ಲಿ ಮಾತ್ರ ಈ ಜೀವವು ಇಲ್ಲವಾಗುತ್ತದೆ. ಹೀಗೆ ಮೋಕ್ಷದವರೆಗಿನ ಎಲ್ಲ ವ್ಯವಹಾರವನ್ನೂ ನಡೆಸುತ್ತಿರುವುದರಿಂದ ಇದು ವ್ಯಾವಹಾರಿಕ, ಎಲ್ಲ ವ್ಯವಹಾರವನ್ನೂ ನಿರ್ವಹಿಸುವುದು.

CC-O. In Public Domain. Digitized by eGangotri

ಈ ವ್ಯಾವಹಾರಿಕ ಜೀವದ ಜೀವತ್ವವು, ಜೀವಧರ್ಮವು,[1] ತಪ್ಪು ತಿಳಿವಳಿಕೆಯಿಂದ[2] ಸಾಕ್ಷಿಯಲ್ಲಿ ಕೂಡ[3] ತೋರುತ್ತದೆ[4]. ಆದರೆ ತಪ್ಪು ತಿಳಿವಳಿಕೆಯನ್ನು ಉಂಟುಮಾಡಿದ ಆವರಣವು ಇಲ್ಲವಾದಾಗ, ಆ ತಪ್ಪು ತಿಳಿವಳಿಕೆಯು ಹೋಗಿ, ಸಾಕ್ಷಿಗೂ ವ್ಯಾವಹಾರಿಕ ಜೀವಕ್ಕೂ ಇರುವ ಭೇದವು ಸ್ಪಷ್ಟವಾಗಿ ಕಂಡಾಗ, ಸಾಕ್ಷಿಯಲ್ಲಿ ಆರೋಪಿತವಾಗಿದ್ದ ಜೀವತ್ವವೂ ಹೋಗುತ್ತದೆ[5], ಇಲ್ಲವಾಗುತ್ತದೆ. ॥ ೧೬ ॥

ತಥಾ ಸರ್ಗಬ್ರಹ್ಮಣೋಶ್ಚ ಭೇದಮಾವೃತ್ಯ ತಿಷ್ಠತಿ
ಯಾ ಶಕ್ತಿಃ ತದ್ವಶಾದ್ಬ್ರಹ್ಮ ವಿಕೃತತ್ವೇನ ಭಾಸತೇ ॥ ೧೭ ॥

ತಥಾ = ಹಾಗೆಯೇ ; ಯಾ ಶಕ್ತಿಃ = ಯಾವ ಶಕ್ತಿಯು ; ಸರ್ಗ ಬ್ರಹ್ಮಣೋಃ = ಸೃಷ್ಟಿ ಮತ್ತು ಬ್ರಹ್ಮ ಇವುಗಳ ; ಭೇದಂ ಚ = ಭೇದವನ್ನೂ; ಆವೃತ್ಯ = ಆವರಿಸಿಕೊಂಡು, ಮರೆಮಾಡಿ ; ತಿಷ್ಠತಿ = ಇದೆಯೋ ; ತದ್ವಶಾತ್ = ಅದರ ದೆಸೆಯಿಂದ ; ಬ್ರಹ್ಮ = ಬ್ರಹ್ಮವು ; ವಿಕೃತತ್ವೇನ = ವಿಕಾರವುಳ್ಳದ್ದಾಗಿ, ಕಾರ್ಯ ಉಳ್ಳದ್ದಾಗಿ ; ಭಾಸತೇ = ತೋರುತ್ತದೆ.

ಹಾಗೆಯೇ (ಹೊರಗೆ) ಸೃಷ್ಟಿಗೂ ಬ್ರಹ್ಮಕ್ಕೂ ಇರುವ ಭೇದವನ್ನು ಯಾವ (ಆವರಣ) ಶಕ್ತಿಯು ಮರೆಮಾಡಿಕೊಂಡಿದೆಯೋ. ಆ ಶಕ್ತಿಯ ದೆಸೆ

---

1. ಜೀವತ್ವ : ವೈಶಿಷ್ಟ್ಯ.

2. ಆರೋಪ : ಇಲ್ಲದ್ದು ಇದ್ದಂತೆ ಕಾಣುವುದು, ಇದೇ ತಪ್ಪು ತಿಳಿವಳಿಕೆ, ಹಗ್ಗದಲ್ಲಿ ಇಲ್ಲದ ಹಾವು ಅದರಲ್ಲಿ ಇದ್ದಂತೆ ತೋರುವುದು.

3. ಶುದ್ಧ ಚೈತನ್ಯಸ್ವರೂಪವಾದ ಸಾಕ್ಷಿಯಲ್ಲಿ ತಪ್ಪು ತಿಳಿವಳಿಕೆಗೆ ಅವಕಾಶವಿಲ್ಲದಿದ್ದರೂ ಕೂಡ.

4. ಜೀವತ್ವವು ತೋರುತ್ತದೆ. ಇದು ಬರಿಯ ತೋರಿಕೆ ಅಷ್ಟೇ ; ನಿಜವಾಗಿ ಇರುವುದಿಲ್ಲ, ವಾಸ್ತವವಲ್ಲ.

5. ಹಗ್ಗದ ಸ್ವರೂಪದ ಅರಿವು ಮರೆಯಾದದ್ದೇ ಅದು ಹಾವೆಂಬ ಭ್ರಾಂತಿಯನ್ನು ಉಂಟುಮಾಡಿದ್ದು. ಇದೇ ಆವರಣ. ಇದು ಹೋದಾಗ ಸಾಕ್ಷಿಯಲ್ಲಿ ಆರೋಪಿಸಲ್ಪಟ್ಟಿದ್ದ ಜೀವತ್ವವು ಹೋಗಿ ಅದಕ್ಕೂ ವ್ಯಾವಹಾರಿಕ ಜೀವಕ್ಕೂ ಇರುವ ಭೇದವು ಸ್ಪಷ್ಟವಾಗುತ್ತದೆ. ಆಗ ವ್ಯಾವಹಾರಿಕ ಜೀವದಲ್ಲಿ ತೋರಿದ ಚೈತನ್ಯವೂ ಚಿದಾಭಾಸವ ಆವೇಶದಿಂದ ಉಂಟಾದದ್ದು ಎಂಬ ಅರಿವು ಬಂದು ಅದೂ ಇಲ್ಲವಾಗಿ ಶುದ್ಧ ಚೈತನ್ಯವಾದ ಸಾಕ್ಷಿಯೊಂದೇ ಇರುತ್ತದೆ. ಇದೇ ಸಚ್ಚಿದಾನಂದಸ್ವರೂಪವಾಗಿ ಇರುವ ಮೋಕ್ಷ.

Sri Vidyabharathi Book Centre, Sringeri

CC-O. In Public Domain. Digitized by eGangotri

ಯಿಂದಲೇ (ಯಾವುದಕ್ಕೂ ಸಂಬಂಧವಿಲ್ಲದ) ಕೇವಲವಾದ ಬ್ರಹ್ಮವು ಜಗತ್ತನ್ನು ಕಾರ್ಯವಾಗಿ ಉಳ್ಳದ್ದಾಗಿ, ಜಗತ್ಕಾರಣವಾಗಿ, ತೋರುತ್ತದೆ (ಇದೂ ತೋರಿಕೆಯೇ, ವಾಸ್ತವವಲ್ಲ).

ಅತ್ರಾಸ್ಯಾವೃತ್ತಿನಾಶೇನ ವಿಭಾತಿ ಬ್ರಹ್ಮಸರ್ಗಯೋಃ
ಭೇದಃ ತಯೋರ್ವಿಕಾರಂ ಸ್ಯಾತ್ ಸರ್ಗೇ ನ ಬ್ರಹ್ಮಣಿ ಕ್ವಚಿತ್ ॥ ೧೯॥

ಅತ್ರಾಪಿ = ಇಲ್ಲಿಯೂ ಕೂಡ; ಆವೃತ್ತಿನಾಶೇನ = ಆವರಣವು, ಮರೆಯು, ನಾಶವಾದಾಗ; ಬ್ರಹ್ಮಸರ್ಗಯೋಃ = ಬ್ರಹ್ಮ ಮತ್ತು ಸೃಷ್ಟಿ ಅಥವಾ ಪ್ರಪಂಚ ಇವುಗಳ; ಭೇದಃ = ಭೇದವು; ವಿಭಾತಿ = ಸ್ಪಷ್ಟವಾಗಿ ತಿಳಿಯುತ್ತದೆ. ತಯೋಃ = ಇವೆರಡರಲ್ಲಿ; ವಿಕಾರಂ = ಬದಲಾಗುವ ಧರ್ಮವು (change); ಸರ್ಗೇ = ಪ್ರಪಂಚದಲ್ಲಿಯೇ; ಬ್ರಹ್ಮಣಿ = ಬ್ರಹ್ಮದಲ್ಲಿ; ನ ಕ್ವಚಿತ್ = ಎಂದಿಗೂ ಇರುವುದಿಲ್ಲ.

ಹೊರಗೂ ಕೂಡ ಮರೆಯು ನಾಶವಾದಾಗ ಬ್ರಹ್ಮಕ್ಕೂ ಪ್ರಪಂಚಕ್ಕೂ ಇರುವ ಭೇದವು ಸ್ಪಷ್ಟವಾಗಿ ತಿಳಿಯುತ್ತದೆ. ಇವೆರಡರಲ್ಲಿ ಕಾರ್ಯಕಾರಣ ಸಂಬಂಧರೂಪವಾದ ವಿಕಾರಿತ್ವವು (ಬದಲಾಗುವ ಧರ್ಮವು) ಪ್ರಪಂಚಕ್ಕೆ[1] ಮಾತ್ರ ಸೇರಿದ್ದು ; ಇದು ಬ್ರಹ್ಮದಲ್ಲಿ ಎಂದಿಗೂ ಇರುವುದಿಲ್ಲ. ॥ ೧೯ ॥

ಈ ಆವರಣವು ನಾಶವಾದಾಗ ಬ್ರಹ್ಮದ ನಿಜಸ್ವರೂಪದ ಅರಿವಾಗುವುದು, ಪ್ರಪಂಚವೂ ವಾಸ್ತವವಲ್ಲ, ಬರಿಯ ತೋರಿಕೆ, ಎಂಬುದೂ ಅರಿವಾಗುವುದು. ಆಗ ಬ್ರಹ್ಮ ಒಂದೇ ಉಳಿದಿರುವುದು.

ಅಸ್ತಿಭಾತಿ ಪ್ರಿಯಂ ರೂಪಂ ನಾಮಚೇತ್ಯಂಶಪಂಚಕಮ್
ಆದ್ಯತ್ರಯಂ ಬ್ರಹ್ಮರೂಪಂ ಜಗದ್ರೂಪಂ ತತೋದ್ವಯಮ್ ॥ ೨೦ ॥

---

1. ಕಾರ್ಯಕಾರಣ ಸಂಬಂಧವು ಅವೆರಡರಲ್ಲೂ ಇರತಕ್ಕದ್ದು. ಕಾರಣತ್ವವು ಕಾರ್ಯ ಸಾಪೇಕ್ಷ (relative) ವಾಗಿದೆ. ಆದುದರಿಂದ ಕಾರ್ಯವಾದ ಪ್ರಪಂಚದಲ್ಲಿ ಆಗುವ ಬದಲಾವಣೆಗಳಿಗೆ ಸಂವಾದಿಯಾದ (corresponding) ಮಾರ್ಪಾಡುಗಳು ಕಾರಣದಲ್ಲಿಯೂ ಆಗಬೇಕಾಗುತ್ತದೆ. ಬ್ರಹ್ಮವು ವಿಕಾರಿ, ಮಾರ್ಪಾಡು ಉಳ್ಳದ್ದು, ಎಂದಾಗುವುದು. ಇದು ಸರಿಯಲ್ಲ, ತಪ್ಪು ತಿಳಿವಳಿಕೆ. ಬ್ರಹ್ಮವು ಕೇವಲ, ಅವಿಕಾರಿ, ಎಂಬ ಬ್ರಹ್ಮದ ನಿಜವಾದ ಸ್ವರೂಪವನ್ನು ಮರೆ ಮಾಡಿದ ಆವರಣವೇ ಈ ತಪ್ಪು ತಿಳಿವಳಿಕೆಗೆ ಅವಕಾಶಕೊಡುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಸ್ತಿ = ಇದೆ; ಭಾತಿ = ಕಾಣುತ್ತದೆ, ಪ್ರಕಾಶಿಸುತ್ತದೆ; ಪ್ರಿಯಂ = ಪ್ರಿಯವಾಗಿದೆ; ರೂಪಂ = ಆಕಾರ; ಚ = ಮತ್ತು; ನಾಮ = ಹೆಸರು; ಇತಿ = ಹೀಗೆ; ಅಂಶಪಂಚಕಂ = ಐದು ಅಂಶಗಳು, (ಪ್ರತಿಯೊಂದು ಪದಾರ್ಥದಲ್ಲೂ ಇವೆ.) ಆದ್ಯತ್ರಯಂ = ಮೊದಲನೆಯ ಮೂರು ಬ್ರಹ್ಮರೂಪಂ = ಬ್ರಹ್ಮ ಸ್ವರೂಪವು; ತತಃ = ಆಮೇಲಿನ; ದ್ವಯಂ = ಎರಡು; ಜಗದ್ರೂಪಂ = ಪ್ರಪಂಚದ ರೂಪವಾಗಿವೆ.

ಪ್ರತಿಯೊಂದು ಪದಾರ್ಥದಲ್ಲಿಯೂ ಇರುವಿಕೆ ಸತ್; ಪ್ರಕಾಶ ಚಿತ್ ಪ್ರಿಯವಾಗಿರುವಿಕೆ ಆನಂದ, ರೂಪ ಅಥವಾ ಆಕಾರ, ಹೆಸರು, ಎಂಬ ಐದು ಅಂಶಗಳಿವೆ. ಇವುಗಳಲ್ಲಿ ಮೊದಲನೆಯ ಮೂರು ಎಂದರೆ ಸಚ್ಚಿದಾನಂದಗಳು ಬ್ರಹ್ಮಸ್ವರೂಪ; ಆಮೇಲಿನ ಎರಡು ಎಂದರೆ ನಾಮರೂಪಗಳು ಜಗದ್ರೂಪ, ಪ್ರಪಂಚದ ರೂಪವಾಗಿವೆ. ॥ ೨೦ ॥

ಖವಾಯ್ವಗ್ನಿಜಲೋರ್ವೀಷು ದೇವತಿರ್ಯಙ್ನರಾದಿಷು
ಅಭಿನ್ನಾಃ ಸಚ್ಚಿದಾನಂದಾಃ ಭಿದ್ಯಂತೇ ರೂಪನಾಮನೀ ॥ ೨೧ ॥

ಖವಾಯ್ವಗ್ನಿಜಲೋರ್ವೀಷು = ಆಕಾಶ ವಾಯು ಅಗ್ನಿ ನೀರು ಭೂಮಿ ಎಂಬ ಪಂಚಭೂತಗಳಲ್ಲಿಯೂ; ದೇವತಿರ್ಯಙ್ನರಾದಿಷು = ದೇವತೆಗಳು, ಇತರ ಜಂತುಗಳು ಮನುಷ್ಯರು ಎಂಬ ಪ್ರಾಣಿಗಳಲ್ಲಿಯೂ; ಸಚ್ಚಿದಾನಂದಾಃ = ಸಚ್ಚಿದಾನಂದಗಳು; ಅಭಿನ್ನಾಃ = ಬೇರೆಯಾಗುವುದಿಲ್ಲ, ಒಂದೇ ರೀತಿಯಾಗಿರುತ್ತವೆ; ರೂಪ ನಾಮನೀ = ಆಕಾರ ಮತ್ತು ಹೆಸರು ಇವೆರಡೂ; ಭಿದ್ಯಂತೇ = ಬೇರೆಬೇರೆಯಾಗುತ್ತವೆ, ಬದಲಾಯಿಸುತ್ತವೆ.

ಆಕಾಶ ವಾಯು ಅಗ್ನಿ ನೀರು ಪೃಥ್ವಿ ಎಂಬ (ಜಡವೆನ್ನಿಸಿಕೊಳ್ಳುವ) ಪಂಚಭೂತಗಳಲ್ಲಿಯೂ, ದೇವತೆಗಳು. ಮನುಷ್ಯರು, ಇತರ ಜಂತುಗಳು ಎಂಬ (ಸಚೇತನವೆನಿಸಿಕೊಳ್ಳುವ) ಪ್ರಾಣಿಗಳಲ್ಲಿಯೂ, ಬ್ರಹ್ಮಸ್ವರೂಪವಾದ ಸಚ್ಚಿದಾನಂದವು ಯಾವ ಮಾರ್ಪಾಡಿಗೂ ಒಳಗಾಗದೇ ಒಂದೇ ರೀತಿಯಾಗಿರುತ್ತದೆ; ಜಗದ್ರೂಪವಾದ ರೂಪನಾಮಗಳು ಮಾತ್ರ ಬದಲಾವಣೆಗೆ ಒಳಗಾಗಿರುತ್ತವೆ. ॥ ೨೧ ॥

CC-O. In Public Domain. Digitized by eGangotri

ಉಪೇಕ್ಷ್ಯ ನಾಮರೂಪೇ ದ್ವೇ ಸಚ್ಚಿದಾನಂದತತ್ಪರಃ
ಸಮಾಧಿಂ ಸರ್ವದಾ ಕುರ್ಯಾತ್ ಹೃದಯೇವಾಥವಾ ಬಹಿಃ ॥೨೨॥

ನಾಮರೂಪೇ ದ್ವೇ = ನಾಮರೂಪಗಳೆರಡನ್ನೂ; ಉಪೇಕ್ಷ್ಯ = ಉಪೇಕ್ಷಿಸಿ, ಕಡೆಗಂಡು, ಅವುಗಳಿಗೆ ಮನಸ್ಸನ್ನು ಸ್ವಲ್ಪವೂ ಕೊಡದೆ; ಸಚ್ಚಿದಾನಂದ ತತ್ಪರಃ = ಸಚ್ಚಿದಾನಂದವನ್ನೇ ಗುರಿಯಾಗಿ ಇಟ್ಟುಕೊಂಡು; ಹೃದಯೇ ವಾ = ಮನಸ್ಸಿನಲ್ಲಿಯೇ ಆಗಲೀ; ಅಥವಾ = ಅಥವಾ; ಬಹಿಃ = ಹೊರಗಡೆಯಾಗಲೀ; ಸರ್ವದಾ = ಎಲ್ಲ ಕಾಲದಲ್ಲಿಯೂ; ಸಮಾಧಿಂ = ಮನಸ್ಸಿನ ವೃತ್ತಿಗಳನ್ನು ನಿಲ್ಲಿಸುವುದನ್ನು; ಕುರ್ಯಾತ್ = ಮಾಡತಕ್ಕದ್ದು.

ನಾಮರೂಪಾತ್ಮಕವಾದ ಪ್ರಪಂಚವನ್ನು ಉಪೇಕ್ಷೆಮಾಡಿ, ಸಚ್ಚಿದಾನಂದವಾದ ಬ್ರಹ್ಮವನ್ನೇ ಗುರಿಯಾಗಿ ಇಟ್ಟುಕೊಂಡು; ಮನಸ್ಸಿನಲ್ಲಿಯೇ[1] ಆಗಲಿ ಹೊರಗಡೆಯಾಗಲೀ[2] ಎಲ್ಲ ಕಾಲದಲ್ಲಿಯೂ ಮನಸ್ಸಿನ ವೃತ್ತಿಗಳನ್ನು ತಡೆದು ನಿಲ್ಲಿಸತಕ್ಕದು. ಇದೇ ಸಮಾಧಿ.

ಸವಿಕಲ್ಪೋ ನಿರ್ವಿಕಲ್ಪಃ ಸಮಾಧಿರ್ದ್ವಿವಿಧೋ ಹೃದಿ
ದೃಶ್ಯಶಬ್ದಾನುವಿದ್ಧೇನ ಸವಿಕಲ್ಪಃ ಪುನರ್ದ್ವಿಧಾ ॥ ೨೩ ॥

ಹೃದಿ = ಮನಸ್ಸಿನ ಒಳಗೆ; ಸಮಾಧಿಃ = ಸಮಾಧಿಯು; ಸವಿಕಲ್ಪಃ = ವಿಕಲ್ಪ ಉಳ್ಳದ್ದು; ನಿರ್ವಿಕಲ್ಪಃ = ವಿಕಲ್ಪವಿಲ್ಲದ್ದು; (ಎಂಬ) ದ್ವಿವಿಧಃ = ಎರಡು ಬಗೆಯಾಗಿದೆ. ಪುನಃ = ಮತ್ತೆ; (ಅವುಗಳಲ್ಲಿ) ಸವಿಕಲ್ಪಃ = ವಿಕಲ್ಪ ಉಳ್ಳದ್ದು; ದೃಶ್ಯ ಶಬ್ದಾನುವಿದ್ಧೇನ = ದೃಶ್ಯದಿಂದ ಕೂಡಿದ್ದು ಮತ್ತು ಶಬ್ದದಿಂದ ಕೂಡಿದ್ದು ಎಂಬ; ದ್ವಿಧಾ = ಎರಡು ಬಗೆಯಾಗಿ ಇದೆ. ॥ ೨೩ ॥

---

1. ಮನಸ್ಸಿನಲ್ಲಿ.ಒಳಗೇ ಮಾಡುವ ಸಮಾಧಿಯಲ್ಲಿ ಸಚ್ಚಿದಾನಂದ ಬ್ರಹ್ಮರೂಪವಾದ ಸಾಕ್ಷಿಗೂ ದೃಶ್ಯರೂಪವಾದ ಅಂತಃಕರಣಕ್ಕೂ ಇರುವ ಭೇದವನ್ನು ಮನಗಂಡು, ದೃಶ್ಯವಾದ, ಅದ್ದರಿಂದಲೇ ಜಡವಾದ, ಮಿಥ್ಯೆಯಾದ, ಅಂತಃಕರಣವನ್ನು ಉಪೇಕ್ಷಿಸಿ ಸಾಕ್ಷಿಭಾವದಲ್ಲಿಯೇ, ಇರುವ ಸ್ಥಿತಿಯೇ ಸಮಾಧಿ.

2. ಹೊರಗಿನ ಸಮಾಧಿಯಲ್ಲಿ ದೃಗ್ರೂಪವಾದ ಬ್ರಹ್ಮಕ್ಕೂ ದೃಶ್ಯವಾದ ಪ್ರಪಂಚಕ್ಕೂ ಇರುವ ಭೇದವನ್ನರಿತು, ದೃಶ್ಯರೂಪವಾದ ಪ್ರಪಂಚವನ್ನು ಮರೆತು ದೃಗ್ರೂಪವಾದ ಬ್ರಹ್ಮವಾಗಿಯೇ ಇರುವುದೇ ಸಮಾಧಿ.

ಇವೆರಡನ್ನೂ ಸ್ವಲ್ಪಮಟ್ಟಿಗೆ ಮುಂದೆ ವಿವರಿಸಿದೆ.

CC-O. In Public Domain. Digitized by eGangotri

ಮನಸ್ಸಿನ ಒಳಗೆ ಸಮಾಧಿಯು ವಿಕಲ್ಪ ಉಳ್ಳದ್ದು ವಿಕಲ್ಪವಿಲ್ಲದ್ದು ಎಂಬ ಎರಡು ಬಗೆಯಾಗಿದೆ; ಮತ್ತೆ ಇವುಗಳಲ್ಲಿ ವಿಕಲ್ಪ ಉಳ್ಳಸಮಾಧಿಯು ದೃಶ್ಯ ದಿಂದ ಕೂಡಿದ್ದು ಮತ್ತು ಶಬ್ದದಿಂದ ಕೂಡಿದ್ದು ಎಂಬ ಎರಡು ಬಗೆಯಾಗಿದೆ.

ಕಾಮಾದ್ಯಾಶ್ಚಿತ್ತಗಾ ದೃಶ್ಯಾಃ ತತ್ಸಾಕ್ಷಿತ್ವೇನ ಚೇತನಮ್
ಧ್ಯಾಯೇದ್ ದೃಶ್ಯಾನುವಿದ್ಧೋಽಯಂ ಸಮಾಧಿಃ ಸವಿಕಲ್ಪಕಃ ॥೨೪॥

ಚಿತ್ತಗಾಃ = ಮನಸ್ಸಿನಲ್ಲಿರುವ; ಕಾಮಾದ್ಯಾಃ = ಕಾಮವೇ ಮುಂತಾದ ವೃತ್ತಿಗಳು; ದೃಶ್ಯಾಃ = ದೃಶ್ಯಗಳು (ದರ್ಶನಕ್ಕೆ ವಿಷಯಗಳು) ಚೇತನಮ್ = ಚೈತನ್ಯವನ್ನು; ತತ್ಸಾಕ್ಷಿತ್ವೇನ = ಅವುಗಳನ್ನು ನೋಡುತ್ತಿರುವ (ವಿಷಯಿ, ದೃಕ್ ತತ್ವವಾಗಿ; ಧ್ಯಾಯೇತ್ = ಧ್ಯಾನಮಾಡತಕ್ಕದ್ದು. ಅಯಂ = ಇದು; ದೃಶ್ಯಾನು ವಿದ್ಧಃ = ದೃಶ್ಯದಿಂದ ಕೂಡಿದ; ಸವಿಕಲ್ಪಕಃ = ವಿಕಲ್ಪವುಳ್ಳ; ಸಮಾಧಿಃ = ಸಮಾಧಿಯು.

ಮನಸ್ಸಿನಲ್ಲಿರುವ ಕಾಮವೇ ಮುಂತಾದ ವೃತ್ತಿಗಳೇ (ಕಾಮಃ ಸಂಕಲ್ಪೋ .....ಸರ್ವಂ ಮನ ಏವ) ದೃಶ್ಯಗಳು. ಇವುಗಳನ್ನು ನೋಡುತ್ತಿರುವ ಚೈತನ್ಯವೇ ಸಾಕ್ಷಿ ಎಂದು ಮಾಡುವ ಧ್ಯಾನವು ದೃಶ್ಯದಿಂದ ಕೂಡಿದ ವಿಕಲ್ಪ ಉಳ್ಳ ಸಮಾಧಿಯು ॥ ೨೪ ॥

ಅಸಂಗಃ ಸಚ್ಚಿದಾನಂದ ಸ್ವಪ್ರಭೋದ್ವೈತವರ್ಜಿತಃ
ಅಸ್ಮೀತಿ ಶಬ್ದವಿದ್ಧೋಯಂ ಸಮಾಧಿಸ್ಸವಿಕಲ್ಪಕಃ ॥ ೨೫ ॥

ಅಸಂಗಃ = ಯಾವುದಕ್ಕೂ ಸಂಬಂಧವಿಲ್ಲದ್ದು; ಸಚ್ಚಿದಾನಂದಃ = ಸಚ್ಚಿದಾನಂದಸ್ವರೂಪವಾದದ್ದು; ಸ್ವಪ್ರಭಃ = ಸ್ವಯಂಪ್ರಕಾಶವಾದದ್ದು; ದ್ವೈತ ವರ್ಜಿತಃ = ಎರಡನೆಯದಿಲ್ಲದ್ದು; (ಆದ ತತ್ವವಾಗಿ) ಅಸ್ಮಿ = ಇದ್ದೇನೆ[1]; ಅಯಂ = (ಎಂಬ) ಇದು ಶಬ್ದವಿದ್ಧಃ = ಶಬ್ದದಿಂದ ಕೂಡಿದ ಸಮಾಧಿಯು; ಸವಿಕಲ್ಪಕಃ = ವಿಕಲ್ಪವುಳ್ಳ; ಸಮಾಧಿಃ = ಸಮಾಧಿಯು.

---

1. ಕಾಮಾದಿ ದೃಶ್ಯವಾಗಿದ್ದ ವೃತ್ತಿಗಳೂ ಕೂಡ ಈ ಸ್ಥಿತಿಯಲ್ಲಿ ಇರುವುದಿಲ್ಲ. ದೃಗ್ ದೃಶ್ಯವೆಂಬ ಭೇದವೂ ಇಲ್ಲವಾಗಿ ಎರಡೂ ಒಂದೇ ಆಗಿವೆ. ಆದರೂ 'ಆಸ್ಮಿ' ಇದ್ದೇನೆ ಎಂಬ ಶಬ್ದದ ಅರ್ಥಮಾತ್ರ ಉಳಿದಿದೆ.

'ಆಸ್ಮಿ, ಇದ್ದೇನೆ' ಎಂಬ ಶಬ್ದದ ಅರ್ಥದಿಂದ ಕೂಡಿರುವುದೇ ಶಬ್ದವಿದ್ಧ ಸವಿಕಲ್ಪ, ಶಬ್ದದಿಂದ ಕೂಡಿರುವ ವಿಕಲ್ಪ ಉಳ್ಳದ್ದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾವುದಕ್ಕೂ ಸಂಬಂಧವಿಲ್ಲದ್ದೂ, ಸಚ್ಚಿದಾನಂದ ಸ್ವರೂಪವಾದದ್ದೂ, ಸ್ವಯಂಪ್ರಕಾಶವಾದ್ದೂ, ಎರಡನೆಯದಿಲ್ಲದ್ದೂ ಆದ ತತ್ಪವಾಗಿ ಇದ್ದೇನೆ ಎಂಬ ಇದು ಶಬ್ದದಿಂದ ಕೂಡಿದ ಸಮಾಧಿಯು

ಸ್ವಾನುಭೂತಿರಸಾವೇಶಾತ್ ದೃಶ್ಯಶಬ್ದಾನುಪೇಕ್ಷಿತುಃ
ನಿರ್ವಿಕಲ್ಪಃ ಸಮಾಧಿಃ ಸ್ಯಾತ್ ನಿವಾತಸ್ಥಿತದೀಪವತ್ ॥೨೬॥

ಸ್ವಾನುಭೂತಿರಸಾವೇಶಾತ್ = ಸ್ವರೂಪಜ್ಞಾನವೆಂಬ ಆನಂದದ ಆವೇಶದಿಂದ; ದೃಶ್ಯಶಬ್ದಾನ್ = (ಮೇಲೆ ಹೇಳಿದ) ದೃಶ್ಯ ಶಬ್ದಗಳನ್ನು; ಉಪೇಕ್ಷಿತುಃ = ಕಡೆಗಾಣುವವನ, ಅವುಗಳ ಕಡೆಗೆ ಮನಸ್ಸನ್ನು ಬಿಡದವನ; (ಸ್ಥಿತಿಯು) ನಿರ್ವಿಕಲ್ಪಃ = ವಿಕಲ್ಪವಿಲ್ಲದ; ಸಮಾಧಿಃ = ಸಮಾಧಿಯು; ಸ್ಯಾತ್ = ಆಗುವುದು. (ಇದು) ನಿವಾತಸ್ಥಿತದೀಪವತ್ = ಗಾಳಿಬೀಸದ ಸ್ಥಳದಲ್ಲಿರುವ ಬೆಳಕಿನಂತೆ;[2] (ನಿಶ್ಚಲವಾಗಿ ಇರುವುದು).

ಸ್ವರೂಪವಾದ ಜ್ಞಾನವೆಂಬ ಆನಂದದ ಆವೇಶದಿಂದ[1] (ಮೇಲೆ ಹೇಳಿದ) ದೃಶ್ಯ ಮತ್ತು ಶಬ್ದಗಳ ಕಡೆಗೆ ಮನಸ್ಸನ್ನು ಕೊಡದ ಸ್ಥಿತಿಯೇ ನಿರ್ವಿಕಲ್ಪ ಸಮಾಧಿ. ಗಾಳಿ[1] ಬೀಸದ ಸ್ಥಳದಲ್ಲಿರುವ ಬೆಳಕಿನಂತೆ[2] ನಿಶ್ಚಲವಾಗಿರುವುದು.

ಹೃದೀವ ಬಾಹ್ಯದೇಶೇ ಪಿ ಯಸ್ಮಿನ್ ಕಸ್ಮಿಂಶ್ಚ ವಸ್ತುನಿ
ಸಮಾಧಿರಾದ್ಯಃ ಸನ್ಮಾತ್ರಾನ್ನಾಮರೂಪಪೃಥಕ್ ಕೃತಿಃ ॥೨೭॥

ಹೃದಿ ಮನಸ್ಸಿನಲ್ಲಿ; ಇವ = (ಮಾಡುವ) ಹಾಗೆ; ಬಾಹ್ಯದೇಶೇ ಅಪಿ = ಹೊರಗಡೆಯೂ ಕೂಡ; ಯಸ್ಮಿನ್ = ಯಾವುದಾದರೂ ಕಸ್ಮಿನ್ಶ್ಚ = ಒಂದು; ವಸ್ತುನಿ = ವಸ್ತುವಿನಲ್ಲಿ, ಪದಾರ್ಥದಲ್ಲಿ; ಸನ್ಮಾತ್ರಾತ್ = ಕೇವಲ ಇರುವಿಕೆಯಿಂದ; ನಾಮರೂಪ–ಪೃಥಕ್ ಕೃತಿಃ = ನಾಮರೂಪಗಳನ್ನು ಬೇರ್ಪಡಿ

---

1. ಸ್ವರೂಪವೇ ಜ್ಞಾನ, ಅದೇ ಸ್ವರೂಪವಾದ ಜ್ಞಾನ : ಆ ಜ್ಞಾನವೇ ಆನಂದ : ಅಂಥ ಆನಂದವಾಗಿ ಇರುವುದೇ ಸ್ವರೂಪವಾದ ಜ್ಞಾನವೆಂಬ ಆನಂದದ ಆವೇಶ.

2. ಗಾಳಿ ಇಲ್ಲದ ಸ್ಥಳದಲ್ಲಿರುವ ಬೆಳಕು ಅಲುಗುತ್ತಿಲ್ಲ, ನಿಶ್ಚಲವಾಗಿದೆ. ಆ ಬೆಳಕಿನಲ್ಲಿ ಕಾಣುವ ವಸ್ತು ಮತ್ತೊಂದಿಲ್ಲ. ತಾನೇ ಬೆಳಕಾಗಿರುವುದರಿಂದ ಅದಕ್ಕೆ ಅದೂ ಕಾಣುತ್ತಿಲ್ಲ ಮತ್ತೊಂದಿದ್ದರಲ್ಲವೇ ಅದು ಕಾಣುವುದು, ಅದನ್ನು ನೋಡುವುದು, ಸಾಧ್ಯವಾಗುವುದು ?

CC-O. In Public Domain. Digitized by eGangotri

ಸುವುದು; ಆದ್ಯಃ = ಮೊದಲನೆಯ (ದೃಶ್ಯವಿದ್ಧ ಸವಿಕಲ್ಪಕವಾದ) ಸಮಾಧಿಃ = ಸಮಾಧಿಯು.

ಮನಸ್ಸಿನಲ್ಲಿ ಮಾಡುವಂತೆಯೇ ಹೊರಗಡೆಯೂ ಕೂಡ ಗೋಚರವಾಗುವ ಪ್ರತಿಯೊಂದು ಪದಾರ್ಥದಲ್ಲಿಯೂ (ಅದರ ಸ್ವರೂಪವಾದ) ಸಚ್ಚಿದಾನಂದದಿಂದ (ಅದರಲ್ಲಿ ಆರೋಪಿತವಾಗಿರುವ) ನಾಮರೂಪಗಳನ್ನು ಬೇರ್ಪಡಿಸಿ ನೋಡುವುದು ದೃಶ್ಯವಿದ್ಧ ಸವಿಕಲ್ಪಕ ಸಮಾಧಿಯಾಗುತ್ತದೆ. ॥ ೨೭ ॥

ಅಖಂಡೈಕರಸಂ ವಸ್ತು ಸಚ್ಚಿದಾನಂದಲಕ್ಷಣಮ್
ಇತ್ಯವಿಚ್ಛಿನ್ನ ಚಿಂತೇಯಂ ಸಮಾಧಿರ್ಮಧ್ಯಮೋಭವೇತ್ ॥ ೨೮ ॥

ವಸ್ತು = ಪರತ್ವವಾದ ಬ್ರಹ್ಮವು; ಅಖಂಡೈಕರಸಮ್ = ಅಖಂಡವಾದದ್ದು ಮತ್ತು ಒಂದೇ ಬಗೆಯಾದದ್ದು; ಇತಿ = ಹೀಗೆಂಬ; ಇಯಂ = ಈ; ಅವಿಚ್ಛಿನ್ನಚಿಂತಾ = ಎಡೆಬಿಡದ ಚಿಂತನೆಯು; ಮಧ್ಯಮ ಮಧ್ಯದ ಎಂದರೆ ಎರಡನೆಯ ಬಗೆಯ (ಶಬ್ದವಿದ್ಧ ಸವಿಕಲ್ಪಕ); ಸಮಾಧಿಃ = ಸಮಾಧಿಯು; ಭವೇತ್ = ಆಗುವುದು.

ಪರತತ್ವವಾದ ಬ್ರಹ್ಮವು ಅಖಂಡವಾದದ್ದು[1] ಮತ್ತು ಒಂದೇ ಬಗೆ[2]ಯಾಗಿ ಇರುವುದು ಎಂಬ ಚಿಂತನೆಯು ಎಡೆಬಿಡದೆ[3] ನಡೆಯುತ್ತಿರುವ ಸ್ಥಿತಿಯೇ ಶಬ್ದವಿದ್ಧಸವಿಕಲ್ಪ ಸಮಾಧಿಯು. ಇದರಲ್ಲಿಯೂ ಈ ರೀತಿಯ ಚಿಂತನೆಯು ಇದೆ. ॥ ೨೮ ॥

ಸ್ತಬ್ಧೀಭಾವೋ ರಸಾಸ್ವಾದಾತ್ ತೃತೀಯಃ ಪೂರ್ವವನ್ಮತಃ
ಏತೈಃಸಮಾಧಿಭಿಃ ಷಡ್ಭಿಃ ನಯೇತ್ಕಾಲಂ ನಿರಂತರಮ್ ॥ ೨೯ ॥

---

1. ಅಖಂಡ : ಭಾಗವಿಲ್ಲದ್ದು ; ಇದು ಅದು ಎನ್ನುವ ಭಾಗವಿಲ್ಲದ್ದು : ತಾನು ಮತ್ತೊಂದು, ವಿಷಯಿ ವಿಷಯ ಎನ್ನುವ ಭಾಗವೂ ಇಲ್ಲದ್ದು,

2. ಏಕರಸ : ಒಂದೇ ಬಗೆಯಾಗಿರುವುದು. *ಅಖಂಡವಾದದ್ದು ಏಕರಸವಾಗಿಯೂ ಇರಲೇ ಬೇಕು.

3. ಎಡೆಬಿಡದೆ, (ಅವಿಚ್ಛಿನ್ನ) ಬೇರೆಯ ಬಗೆಯ ತಿಳಿವಳಿಕೆಗಳು ಮಧ್ಯದಲ್ಲಿ ಸೇರಿಕೊಳ್ಳದಂತೆ, ಹರಿಯುತ್ತಿರುವ ಒಂದೇ ಬಗೆಯ ಅರಿವಿನ ಪ್ರವಾಹಧಾರೆ.
(ವಿಜಾತೀಯಪ್ರತ್ಯಯ-ಅನಂತರಿತ-ಸಜಾತೀಯ-ಪ್ರತ್ಯಯ-ಪ್ರವಾಹಃ)

Sri Vidyabharathi Book Centre, Sringeri

CC-O. In Public Domain. Digitized by eGangotri

ಪೂರ್ವವತ್ - ಹಿಂದಿನಂತೆಯೇ; ರಸಾಸ್ವಾದಾತ್ = ಆನಂದಾನುಭವದ ಆವೇಶದಿಂದ; ಸ್ತಬ್ಧೀಭಾವಃ (ಮನಸ್ಸು) ಸುಮ್ಮನಾಗುವುದು, ನಿಶ್ಚಲವಾಗುವುದು, ಅಲುಗದಿರುವುದು; ತೃತೀಯಃ = ಮೂರನೆಯದು,(ನಿರ್ವಿಕಲ್ಪ ಸಮಾಧಿ ಎಂದು); ಮತಃ = ತಿಳಿಯಲ್ಪಟ್ಟಿದೆ. ಏತೈಃ ಈ; ಷಡ್ಭಿಃ = ಆರು (ಬಗೆಯ); ಸಮಾಧಿಭಿಃ = ಸಮಾಧಿಗಳಿಂದ; ನಿರಂತರಂ = ಯಾವಾಗಲೂ; ಕಾಲಂ = ಕಾಲವನ್ನು; ನಯೇತ್ = ಕಳೆಯತಕ್ಕದ್ದು.

ಹಿಂದಿನಂತೆಯೇ ಆನಂದಾನುಭವದ ಆವೇಶದಿಂದ ಮನಸ್ಸು ಸುಮ್ಮನಾಗುವುದೇ ನಿರ್ವಿಕಲ್ಪ ಸಮಾಧಿ. ಈ ಆರು ಬಗೆಯ ಸಮಾಧಿಗಳಿಂದ ಯಾವಾಗಲೂ ಕಾಲವನ್ನು ಕಳೆಯತಕ್ಕದ್ದು. ॥ ೨೯ ॥

ಸಮಾಧಿ ಎಂದರೆ ಮನಸ್ಸಿನ ವೃತ್ತಿಗಳನ್ನು ತಡೆದು ಮನಸ್ಸನ್ನು ನಿಲ್ಲಿಸುವುದು. ಇದು ಆಗಬೇಕಾದದ್ದೂ, ಆಗುವುದೂ, ಮನಸ್ಸಿನಲ್ಲಿಯೇ, ಒಳಗೇ, ಆದರೂ ವೃತ್ತಿಗಳನ್ನು ಎಬ್ಬಿಸುವ ವಿಷಯಗಳು ಮನಸ್ಸಿನ ಒಳಗೇ ಇರುವ ವಾಸನೆಗಳಾಗಬಹುದು ಅಥವಾ ಇಂದ್ರಿಯಗಳಿಂದ ಗ್ರಹಿಸುವ ದೇಹದ ಹೊರಗಿನ ವಿಷಯಗಳೂ ಆಗಬಹುದು. ಈ ಭೇದವನ್ನು ಹಿಡಿದೇ ಸಮಾಧಿಯನ್ನು ಒಳಗಿನದು ಹೊರಗಿನದು ಎಂದು ಹೇಳಿದೆ.

ಈ ಎರಡು ಬಗೆಯ ಸಮಾಧಿಗಳೂ ಸವಿಕಲ್ಪ ನಿರ್ವಿಕಲ್ಪ ಎಂದು ಮತ್ತೆ ಎರಡು ರೀತಿಯಾಗಿವೆ. ಸವಿಕಲ್ಪ ಸಮಾಧಿಗಳೆರಡರಲ್ಲೂ ದೃಶ್ಯದಿಂದ ಕೂಡಿದ್ದು ಮತ್ತು ಶಬ್ದದಿಂದ ಕೂಡಿದ್ದು ಎಂಬ ಎರಡು ಬಗೆಗಳಿವೆ.

ಇಂದ್ರಿಯಗಳು ಗ್ರಹಿಸಿದ ವಿಷಯಗಳೊಂದೊಂದರಲ್ಲೂ ಇರುವ ಸತ್ ಚಿತ್ ಆನಂದ ರೂಪ ನಾಮ ಎಂಬ ಐದು ಅಂಶಗಳನ್ನು ವಿಂಗಡಿಸಿ ಜಗದ್ರೂಪವೂ ಮಿಥ್ಯೆಯೂ ಅದ ರೂಪನಾಮಗಳನ್ನು ಉಪೇಕ್ಷಿಸಿ ಬ್ರಹ್ಮ ಸ್ವರೂಪವಾದ ಸಚ್ಚಿದಾನಂದದಲ್ಲಿ, ಸನ್ಮಾತ್ರದಲ್ಲಿ, ಮನಸ್ಸನ್ನು ನಿಲ್ಲಿಸುವುದು ಹೊರಗಿನ ದೃಶ್ಯವಿದ್ಧ ಸವಿಕಲ್ಪ ಸಮಾಧಿ. (27,20, 22)

ಎಲ್ಲ ವಿಚಾರವನ್ನೂ ನಿಲ್ಲಿಸಿ ಅಖಂಡವೂ ಏಕರಸವೂ ಸಚ್ಚಿದಾನಂದ ಸ್ವರೂಪವೂ ಆಗಿರುವುದು ಬ್ರಹ್ಮ, ಎಂಬ ಚಿಂತನೆಯನ್ನು ಎಡೆಬಿಡದೆ ಮಾಡುತ್ತಿರುವುದು ಹೊರಗಿನ ಶಬ್ದವಿದ್ಧ ಸವಿಕಲ್ಪಕ ಸಮಾಧಿ (28). ಇದರಲ್ಲಿ ಶಬ್ದಗಳ ಅರ್ಥವು ವಿಷಯವಾಗಿ ಇದೆ. ಅದಕ್ಕೆ ಯಾವ ಆಕಾರವೂ ಇರುವುದಿಲ್ಲ.

CC-O. In Public Domain. Digitized by eGangotri

ಇಂಥ ಸಮಾಧಿಯ ಆನಂದಾನುಭವದಲ್ಲಿ ಮನಸ್ಸು ಮುಳುಗಿಹೋಗಿ, ನಿಂತು, ಇಲ್ಲವಾಗಿ, ಆನಂದ ಒಂದೇ ಉಳಿದಿರುವ ಸ್ಥಿತಿಯು ಬಾಹ್ಯ ನಿರ್ವಿಕಲ್ಪಕ ಸಮಾಧಿ (29). ಇದರಲ್ಲಿ ಯಾವ ಅನುಭವವೂ ಇರುವುದಿಲ್ಲ.

ಇಂದ್ರಿಯಗಳ ಕೆಲಸವನ್ನು ತಡೆದಾಗ ಮನಸ್ಸಿನಲ್ಲಿರುವ ವಾಸನೆಗಳೇ ಎದ್ದು ಕಾವಾದಿ ವೃತ್ತಿಗಳಾಗಿ ಕಾಣಿಸುತ್ತವೆ. ಕಾಣಿಸುತ್ತಿರುವ ಇವು ಸುಳ್ಳು, ಮಿಥ್ಯೆ, ಎಂದು ಇವುಗಳನ್ನು ಉಪೇಕ್ಷಿಸಬೇಕು. ಇವು ನಾನೇ ಎಂಬ ಅಭಿಮಾನವನ್ನೂ, ನನ್ನವು ಎಂಬ ಆದರವನ್ನೂ ಇಡಬಾರದು. ಇವುಗಳನ್ನು ನೋಡುತ್ತಿರುವ ಸಾಕ್ಷಿಯೇ ಬ್ರಹ್ಮ, ಅದೇ ನಾನು ಎಂದು ಮನಸ್ಸನ್ನು ಸಾಕ್ಷಿಯಲ್ಲಿಯೇ ನಿಲ್ಲಿಸಬೇಕು. ಇದು ಒಳಗಿನ ದೃಶ್ಯವಿದ್ಧ ಸವಿಕಲ್ಪ ಸಮಾಧಿ. (24)

ಯಾವ ಸಂಬಂಧವೂ ಇಲ್ಲದ, ಸಚ್ಚಿದಾನಂದ ಸ್ವರೂಪವಾದ ಸ್ವಯಂಪ್ರಕಾಶವಾದ ತತ್ತ್ವವಾಗಿ ಇದ್ದೇನೆ ಎಂಬ ಭಾವನೆಯಲ್ಲಿ ಮನಸ್ಸನ್ನು ನಿಲ್ಲಿಸುವುದು ಒಳಗಿನ ಶಬ್ದವಿದ್ಧ ಸಮಾಧಿ. ಇದರಲ್ಲಿ ವಿಶೇಷಣಗಳೆಲ್ಲ ನಿರಾಕಾರಗಳಾದರೂ ಅವಕ್ಕೆ ಪದಾರ್ಥತ್ವವಿದೆ. ಇದೇ ಶಬ್ದವಿದ್ಧತೆ. ವಿಷಯತ್ವವೂ ಇರುವುದರಿಂದ ಇದು ಸವಿಕಲ್ಪಕ.

ಹೀಗೆ ಸವಿಕಲ್ಪಕ ಸಮಾಧಿಯ ಆನಂದದ ಅನುಭವದಿಂದ ತನ್ನನ್ನೇ ಮರೆತು ಮನಸ್ಸು ಇಲ್ಲವಾಗಿ, ಆನಂದ ಸ್ವರೂಪವೇ ಬ್ರಹ್ಮವೇ, ಆಗಿಬಿಡುತ್ತದೆ. ಆಗ ಇರುವುದು ಸಾಕ್ಷಿಯಾಗಿದ್ದ ಬ್ರಹ್ಮತತ್ವ ಒಂದೇ; ಸಾಕ್ಷ್ಯವು ಯಾವುದೂ ಇರುವುದೇ ಇಲ್ಲ. ಇದು ಒಳಗಿನ ನಿರ್ವಿಕಲ್ಪ ಸಮಾಧಿ (25).

ಹೀಗೆ ಒಳಗೆ ಹೊರಗೆ ಎಂದು ಎರಡು ಭಾಗ ಮಾಡಿ ಒಂದೊಂದನ್ನೂ ಮೂರು ಬಗೆಯಾಗಿ ವಿಂಗಡಿಸಿರುವುದರಿಂದ ಸಮಾಧಿಗಳನ್ನು ಆರು ಬಗೆ ಎಂದಿದೆ. ಆದರೂ ನಿರ್ವಿಕಲ್ಪ ಸಮಾಧಿಗಳು ಒಂದೇ ರೀತಿಯಾಗಿರುವುದರಿಂದ ಸಮಾಧಿಗಳು ಐದು ರೀತಿಯವು ಎಂದೂ ಹೇಳಬಹುದು.

ಈ ಐದು ಅಥವಾ ಆರು ಬಗೆಯ ಸಮಾಧಿಯಲ್ಲಿ ತನ್ನ ಕಾಲವೆಲ್ಲವನ್ನೂ ಕಳೆಯತಕ್ಕದ್ದು. ಇದೇ ಜ್ಞಾನಯೋಗದಲ್ಲಿ, ವಿಚಾರ ಮಾರ್ಗದಲ್ಲಿ, ನಡೆಯುವವನ ನಿದಿಧ್ಯಾಸ.

Sri Vidyabharathi Book Centre, Sringeri

CC-O. In Public Domain. Digitized by eGangotri

ದೇಹಾಭಿಮಾನೇ ಗಲಿತೇ ವಿಜ್ಞಾತೇ ಪರಮಾತ್ಮನಿ
ಯತ್ರ ಯತ್ರ ಮನೋ ಯಾತಿ ತತ್ರ ತತ್ರ ಸಮಾಧಯಃ ॥ ೩೦ ॥

ದೇಹಾಭಿಮಾನೇ = ದೇಹವು ನಾನು ಎಂಬ (ತಪ್ಪು) ತಿಳಿವಳಿಕೆಯು ; ಗಲಿತೇ - ಬಿಟ್ಟುಹೋದಾಗ ; ಪರಮಾತ್ಮನಿ = ಪರತತ್ತ್ವವಾದ ಆತ್ಮಸ್ವರೂಪವು; ವಿಜ್ಞಾತೇ = ಅನುಭವವಾದಾಗ ; ಮನಃ - ಮನಸ್ಸು, ಅಂತಃಕರಣವು ; ಯತ್ರ ಯತ್ರ = ಎಲ್ಲೆಲ್ಲಿ ; ಯಾತಿ = ಹೋಗುತ್ತದೆಯೋ ; ತತ್ರ ತತ್ರ = ಅಲ್ಲಲ್ಲಿ ; ಸಮಾಧಯಃ - ಸಮಾಧಿಗಳು (ಆಗುತ್ತವೆ).

ದೇಹಾಭಿಮಾನವು, ದೇಹವು[1] ನಾನು ಎಂಬ ತಪ್ಪು ತಿಳಿವಳಿಕೆಯು, ಬಿಟ್ಟು ಹೋದಾಗ, ಪರತತ್ತ್ವವಾದ ಬ್ರಹ್ಮದ ಅಥವಾ ಆತ್ಮದ ಅರಿವು[2] ಅಥವಾ ಅನುಭವವು ಆದಾಗ ಮನಸ್ಸು ಎಲ್ಲೆಲ್ಲಿ ಹೋದರೂ ಅಲ್ಲಲ್ಲಿ ಸಮಾಧಿಗಳಾಗುತ್ತವೆ.

ಮೇಲೆ ಹೇಳಿದ ಸಮಾಧಿಗಳ ಎಡೆಬಿಡದ ಅಭ್ಯಾಸದಿಂದ ಮನಸ್ಸು ಯಾವಾಗಲೂ ಬ್ರಹ್ಮದಲ್ಲಿಯೇ ನೆಲೆಸಿರುವ ಸ್ಥಿತಿ ಉಂಟಾಗುತ್ತದೆ. ಆಗ ಮನಸ್ಸಿಗೆ ಹೊರಗಿನಿಂದಲೋ ಒಳಗಡೆಯಿಂದಲೋ ಗೋಚರವಾಗುವುದೆಲ್ಲವೂ, ಮನಸ್ಸನ್ನು ಬ್ರಹ್ಮಕ್ಕೇ ಸೇರಿಸುತ್ತದೆ. ಇದನ್ನೇ ಎಲ್ಲೆಲ್ಲಿ ಹೋದರೂ ಅಲ್ಲಲ್ಲಿ ಸಮಾಧಿಗಳು ಎಂದಿರುವುದು. ಇಂಥವರಿಗೆ ಸಮಾಧಿ ವ್ಯುತ್ಥಾನ ಎಂಬ ಭೇದವೂ ಇಲ್ಲ. ॥ ೩೦ ॥

ಶ್ರವಣ ಸಾಧನಗಳಾದ ವೈರಾಗ್ಯ ಸಂನ್ಯಾಸಾದಿಗಳನ್ನು ಸಾಧಿಸುವುದು ಬಹಳ ಕಷ್ಟವೆಂಬುದನ್ನು ಕಂಡು, ಶ್ರವಣಾದಿಗಳಿಂದಲೂ ಬರತಕ್ಕ ಬ್ರಹ್ಮಾತ್ಮೈಕ್ಯಜ್ಞಾನರೂಪವಾದ ಫಲವು ಆಗಲಾರದೆಂದು ತನ್ನ ಯುಕ್ತಿಯಿಂದಲೇ ಊಹಿಸಿ, ಸಾಧನೆಯನ್ನೇ ಬಿಡಲು ಅನುವಾಗುತ್ತಿರುವವನಿಗೆ, ಫಲದ ವಿಷಯ

---

1. ಸ್ಥೂಲ ಸೂಕ್ಷ್ಮ ಕಾರಣಗಳೆಂಬ ಮೂರು ದೇಹಗಳಲ್ಲಿಯೂ ಅಭಿಮಾನ ಹೋಗಬೇಕು. ಸೂಕ್ಷ್ಮ ಕಾರಣ ದೇಹಗಳನ್ನು ಕೂಡಿಸಿ ಲಿಂಗ ದೇಹವೆಂದುಕೊಂಡಾಗ ದೇಹಗಳು ಸ್ಥೂಲ ಮತ್ತು ಲಿಂಗ ಎಂದು ಎರಡಾಗುತ್ತವೆ.

2. ಈ ಅರಿವಿಗೆ ಬ್ರಹ್ಮವು ವಿಷಯವಾಗಿರುವುದಿಲ್ಲ. ಇಲ್ಲಿ ವಿಷಯಿ-ವಿಷಯ ಸಂಬಂಧವಿಲ್ಲ. ಬ್ರಹ್ಮವಾಗಿರುವುದೇ ಬ್ರಹ್ಮದ ಅರಿವು, ಬ್ರಹ್ಮಜ್ಞಾನ, ಬ್ರಹ್ಮಾನುಭವ.

Sri Vidyabharathi Book Centre, Sringeri

CC-O. In Public Domain. Digitized by eGangotri

ದಲ್ಲಿ ಧೈರ್ಯ ಹೇಳಿ ಸಾಧನೆಯಲ್ಲಿ ತೊಡಗಿರುವಂತೆ ಮಾಡುವುದಕ್ಕೆ ಶ್ರುತಿ ವಾಕ್ಯವನ್ನೇ ಎತ್ತಿಹೇಳುತ್ತಾರೆ :

ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥ ೮ ॥

ಪರಾವರೇ[1] = ಆಚೆಯದೂ ಈಚೆಯದೂ ಆದ ; ತಸ್ಮಿನ್ ಆ ಪರ ತತ್ವವು ; ದೃಷ್ಟೇ = ಕಂಡಾಗ, ಅನುಭವವಾದಾಗ ; ಅಸ್ಯ ಅವನ ; ಹೃದಯ ಗ್ರಂಥಿಃ ಹೃದಯದ ಗಂಟು ; ಭಿದ್ಯತೇ = ಒಡೆದು ಹೋಗುತ್ತದೆ : ಸರ್ವ ಸಂಶಯಾಃ = ಎಲ್ಲ ಸಂದೇಹಗಳೂ ; ಛಿದ್ಯಂತೇ = ಕತ್ತರಿಸಿ ಹೋಗುತ್ತವೆ ; (ಮತ್ತು) ಕರ್ಮಾಣಿ = ಕರ್ಮಗಳೆಲ್ಲಾ ; ಕ್ಷೀಯಂತೇ = ಸವೆಯುತ್ತವೆ, ನಾಶ ವಾಗಿ ಹೋಗುತ್ತವೆ.

ಆಚೆಯದೂ ಈಚೆಯದೂ ಆದ ಆ ಪರತತ್ವದ ಅನುಭವವಾದಾಗ ಅಂಥವನ ಹೃದಯದ ಗಂಟು[2] ಒಡೆದುಹೋಗುತ್ತದೆ. ಎಲ್ಲ ಸಂದೇಹಗಳೂ[3]

---

1. ಪರಾವರಃ: ಪರ ಎಂದರೆ ನದಿಯ ಆಚೆಯ ದಡ, ಅವರ ಎಂದರೆ ಈಚೆಯ; ನಾವು ನಿಂತಿರುವ; ದಡ. ಎರಡನ್ನೂ ಸೇರಿಸಿ ಹೇಳುವುದು 'ಪರಾವರ' ಎಂದು. ಇಲ್ಲಿ ಪರ ಎಂದರೆ ದೇಹದ ಹೊರಗೆ ತಿಳಿವಳಿಕೆಯ ವಿಷಯಿಗಳಾಗಿ ಕಾಣುತ್ತಿರುವ ಎಲ್ಲ ಪದಾರ್ಥಗಳಲ್ಲಿಯೂ ವ್ಯಾಪಿಸಿಕೊಂಡು ಅವುಗಳ ರೂಪದಲ್ಲಿಯೇ ಗೋಚರವಾಗುತ್ತಿರುವ ಚೈತನ್ಯಸ್ವರೂಪವಾದ ಪರತತ್ವ, ಪರಮಾತ್ಮ ; ಅವರ ಎಂದರೆ ದೇಹದ ಒಳಗಿರುವ, ಎಲ್ಲವನ್ನೂ ನೋಡುತ್ತಿರುವ, 'ನಾನು' ಎಂಬ ಮಾತಿನ ನಿಜವಾದ ಅರ್ಥವಾದ ಸಾಕ್ಷಿರೂಪವಾದ ಶುದ್ಧಚೈತನ್ಯ ; ಇವೆರಡೂ ಒಂದೇ ಆಗಿರುವುದೇ ಪರಾವರ, ಆಚೆಯದೂ ಈಚೆಯದೂ ಆದ ಪರತತ್ವ. ಅಥವಾ ಆಚೆ ಯದು ಈಚೆಯದು, ಅದು ಇದು, ಎಂಬ ಭೇದಕ್ಕೆ ಅಧಿಷ್ಠಾನವಾದ, ಅಖಂಡವಾದ ಅಭಿನ್ನ ವಾದ ಪರತತ್ವವೆಂದೂ ಹೇಳಬಹುದು.

2. ಹೃದಯದ ಗಂಟು : ಹೃತ್ ಎಂದರೆ ಅಹಂಕಾರ ; ಅಯಂ ಎಂದರೆ ಅಪರೋಕ್ಷ ವಾಗಿರುವ ಸಾಕ್ಷಿ ; ಹೃದಯ ಎಂದರೆ ಇವೆರಡರ ಭೇದದ ಅರಿವಿಲ್ಲದೆ, ಇವೆರಡೂ ಒಂದೇ ಎಂದು ಭಾವಿಸುವ ಭ್ರಾಂತಸ್ಥಿತಿ. ಇವೆರಡೂ ಒಂದು ಮತ್ತೊಂದೆಂದು ತೋರುವಂತೆ ಬಿಡಿಸ ಲಾಗದ ತೊಡಕಾಗಿ ಸೇರಿಕೊಂಡಿರುವ ಸ್ಥಿತಿಯೇ ಗಂಟು, ಚಿಜ್ಜಡಗ್ರಂಥಿ.

3. ಸಂಶಯಾಃ : ಶಾಸ್ತ್ರಾಧ್ಯಯನದಿಂದಲೂ ಗುರೂಪದೇಶದಿಂದಲೂ ತಾನು ಬ್ರಹ್ಮ ವೆಂಬ ತಿಳಿವಳಿಕೆಯುಂಟಾಗಿದ್ದರೂ ಕೂಡ, ಈ ತಿಳಿವಳಿಕೆಯು ಶಾಶ್ವತವೋ ಅಲ್ಲವೋ, ಇದು ಸರಿಯೋ ತಪ್ಪೋ, ಇದರಿಂದ ಮುಕ್ತಿಯಾಗುವುದೋ ಇಲ್ಲವೋ, ಇವೇ ಮೊದಲಾದ ಅನೇಕ ಸಂದೇಹಗಳಿಗೆ ಅವಕಾಶವಿದೆ. ಆದರೆ ಬ್ರಹ್ಮಾನುಭವ ಅಥವಾ ಅದ್ವೈತ ಆದ ಮೇಲೆ ಯಾವ ಸಂದೇಹಕ್ಕೂ ಎಡೆ ಇಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕತ್ತರಿಸಿ ಬೀಳುತ್ತವೆ, ಎಲ್ಲ ಕರ್ಮಗಳೂ ಸವೆದು ಹೋಗುತ್ತವೆ.

ಪರಾವರವಾದ ಪರತತ್ವವೇ ತಾನು ಎಂಬ ಅನುಭವವಾದವನ ಹೃದಯದ ಗಂಟು ಹರಿದು ಹೋಗುತ್ತದೆ, ಸಾಕ್ಷಿ ಮತ್ತು ಅಹಂಕಾರಗಳ ವಿವೇಕವಿಲ್ಲದ್ದರಿಂದ ಉಂಟಾಗಿರುವ ಪರಸ್ಪರ ತಾದಾತ್ಮ್ಯವೆಂಬ ತೊಡಕಾದ ಗಂಟು ಬಿಚ್ಚಿಹೋಗಿ ಅವೆರಡೂ ಸ್ಪಷ್ಟವಾಗಿ ಬೇರೆಬೇರೆಯಾಗಿ ತಿಳಿಯಬರುತ್ತವೆ ಆ ತೊಡಕಿನಿಂದ ತಾನು ಅಹಂಕಾರವೆಂದುಕೊಂಡಿದ್ದ ಭ್ರಾಂತಿಯೂ ಹೋಗಿ ಕೇವಲ ಸಾಕ್ಷಿಯಾಗಿಯೇ, ಬ್ರಹ್ಮವಾಗಿಯೇ ಇರುತ್ತಾನೆ. ಆ ಸ್ಥಿತಿಯಲ್ಲಿ ಯಾವ ಸಂಶಯಕ್ಕೂ ಅವಕಾಶವೇ ಇರುವುದಿಲ್ಲ. ಎಲ್ಲ ಕರ್ಮಗಳೂ ನಾಶವಾಗುತ್ತವೆ. ಸಂಚಿತ ಮತ್ತು ಆಗಾಮಿ (ಅನಾರಬ್ಧ) ಕರ್ಮಗಳು ಜ್ಞಾನವಾದ ಕ್ಷಣದಲ್ಲಿಯೇ ನಾಶವಾಗುತ್ತವೆ. ಅನುಭವದಿಂದ ಮಾತ್ರ ಸವೆಸಬೇಕಾದ ಪ್ರಾರಬ್ಧ ಕರ್ಮವು ಮಿಕ್ಕಿರುವಂತೆ ಕಾಣುತ್ತದೆ. ಆದರೂ ಅದರ ಅನುಭವವಾಗುತ್ತಿರುವುದು ದೃಶ್ಯವಾದ ದೇಹಾದಿಸಂಘಾತಕ್ಕೆ, ದೃಗ್ರೂಪವಾದ ಸಾಕ್ಷಿಯಾದ ತನಗಲ್ಲ ಎಂಬ ಅರಿವು ಇರುವುದರಿಂದ ಆ ದೃಶ್ಯವೂ ಅವನ ಪಾಲಿಗೆ ಸುಳ್ಳಾಗಿಯೇ, 'ಬಾಧಿತ ಪ್ರತ್ಯಯ'ವಾಗಿಯೇ, ಇರುತ್ತದೆ. ಇದೇ ಜೀವನ್ಮುಕ್ತಿ. ॥ ೩೧ ॥

ಸಾಕ್ಷಿಯ ಸ್ವರೂಪವು ಬ್ರಹ್ಮವೇ ಆದರೆ ಅದು ನ್ಯಾಯವಾಗಿ ಜೀವವೆಂಬುದನ್ನು ಒಪ್ಪುಲಾಗುವುದಿಲ್ಲ. ಅದು ಜೀವವೇ ಆದರೆ ಬ್ರಹ್ಮವೆಂದು ಒಪ್ಪುವುದೂ ಆಗುವುದಿಲ್ಲ. ಹೇಗಾದರೂ ವಿಷಯವೂ ಪ್ರಯೋಜನವೂ ಇಲ್ಲದ್ದರಿಂದ ಶಾಸ್ತ್ರವೇ ನಿರರ್ಥಕವಾಗುವುದು ಎಂಬ ಆಕ್ಷೇಪಣೆಗೆ ಉತ್ತರವಾಗಿ 'ಸಾಕ್ಷಿಯ ಜೀವತ್ವವು ಉಪಾಧಿಯಿಂದ ಆದದ್ದು (Conditional) ಮತ್ತು ಅದರ ಬ್ರಹ್ಮತ್ವವು ಸಹಜವಾದದ್ದು; ಆದ್ದರಿಂದ ಎರಡೂ ಆಯಾ ಅವಸ್ಥೆಗಳಲ್ಲಿ ನ್ಯಾಯವಾಗಿಯೇ ಹೊಂದುತ್ತವೆ' ಎಂಬುದನ್ನು ಮುಂದೆ ಗ್ರಂಥದ ಕೊನೆಯವರೆಗೆ ವಿವರಿಸತೊಡಗಿ ಜೀವದ ಅವಾಂತರ ಭೇದಗಳನ್ನು ಹೇಳುತ್ತಾರೆ.

ಅವಚ್ಛಿನ್ನಶ್ಚಿದಾಭಾಸಃ ತೃತೀಯಸ್ಸ್ವಪ್ನಕಲ್ಪಿತಃ
ವಿಜ್ಞೇಯ ಸ್ತ್ರಿವಿಧೋ ಜೀವಃ ತತ್ರಾದ್ಯಃ ಪಾರಮಾರ್ಥಿಕಃ ॥ ೩೨ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಜೀವಃ = ಜೀವನು ; ಅವಚ್ಛಿನ್ನಃ = ಪರಿಮಿತಿಯುಳ್ಳದ್ದು, ಮಿತವಾದದ್ದು ; ಚಿದಾಭಾಸಃ = ಚೈತನ್ಯದ ತೋರಿಕೆ ; ತೃತೀಯಃ = ಮೂರನೆಯದಾಗಿ ; ಸ್ವಪ್ನಕಲ್ಪಿತಃ = ಕನಸಿನಲ್ಲಿ ಉಂಟಾದದ್ದು ; (ಎಂಬ) ತ್ರಿವಿಧಃ = ಮೂರು ಬಗೆಯದಾಗಿ, ವಿಜ್ಞೇಯಃ = ತಿಳಿಯತಕ್ಕದ್ದು ; ತತ್ರ ಆವುಗಳಲ್ಲಿ ; ಆದ್ಯಃ = ಮೊದಲನೆಯದು ; ಪಾರಮಾರ್ಥಿಕಃ = ವಾಸ್ತವವಾದದ್ದು.

ಜೀವವು, ಮಿತವಾದದ್ದು[1] ಚೈತನ್ಯದ ತೋರಿಕೆ[2] ಮತ್ತು ಕನಸಿನಲ್ಲಿ ಉಂಟಾದದ್ದು[3] ಎಂದು ಮೂರು ಬಗೆಯದು ಎಂದು ತಿಳಿಯತಕ್ಕದ್ದು. ಇವುಗಳಲ್ಲಿ ಮೊದಲನೆಯದು ವಾಸ್ತವವಾದದ್ದು, ಪಾರಮಾರ್ಥಿಕವಾದದ್ದು[4]

॥ ೩೨ ॥

---

1 ಮಿತವಾದದ್ದು, (ಅವಚ್ಛಿನ್ನಃ) ಅಖಂಡವೂ ಆನಂತವೂ ಆದ ಶುದ್ಧ ಚೈತನ್ಯದ ಭಾಗದಂತೆ ಇರುವುದು. ಮಮೈವಾಂಶೋ ಜೀವಲೋಕೇ ಜೀವ ಭೂತಃ ಸನಾತನಃ ಎಂಬ ಗೀತಾ (೧೫–೭)ವಾಕ್ಯಕ್ಕೆ ಶ್ರೀ ಶಂಕರರು 'ಅಂಶ ಇವ ಕಲ್ಪಿತಃ' ಎಂದು ಭಾಷ್ಯದಲ್ಲಿ ಹೇಳಿದ್ದಾರೆ; ಪರಿಪೂರ್ಣವೂ ಅನಂತವೂ ಆಗಿರುವ ಚೈತನ್ಯದಲ್ಲಿ ಅವಿದ್ಯಾ ಅಹಂಕಾರಗಳಿಂದ ಒಂದು ಭಾಗವಾದಂತೆ ತೋರುತ್ತಿರುವುದು. ಅವಿದ್ಯೆ ಅಹಂಕಾರಗಳೂ ಸುಳ್ಳು (ಮಿಥ್ಯಾ). ಆದ್ದರಿಂದ ಅಂಶವೂ ತೋರಿಕೆಯೇ.

2. ಚಿದಾಭಾಸಃ, ಚೈತನ್ಯದ ತೋರಿಕೆ. ಅವಿದ್ಯೆಯೇ ಮೊದಲಾದ ಲಿಂಗದೇಹವು. ಸ್ವತಃ ಅಚೇತನವಾಗಿದ್ದರೂ ಕೂಡ, ಆದರಲ್ಲಿ ಆಗಿರುವ ಚೈತನ್ಯದ ಪ್ರತಿ ಬಿಂಬದಿಂದ ಸಚೇತನವಾಗಿ ತೋರುತ್ತಿದೆ. ಹೀಗೆ ತೋರುತ್ತಿರುವ ಜೀವವನ್ನು ಚಿದಾಭಾಸವೆಂದು ಕರೆದಿದೆ.

3. ಕನಸಿನಲ್ಲಿ ಈ ಎಚ್ಚರದ ದೇಹದಲ್ಲಲ್ಲದೆ ಮತ್ತೊಂದು–ಮೃಗದ್ದೋ ಪಕ್ಷಿಯದೋ ಮನುಷ್ಯನದೋ–ದೇಹದಲ್ಲಿ ಎಲ್ಲೆಲ್ಲಿಯೋ ಆಲೆದು ಹಲವು ಬಗೆಯ ಅನುಭವವನ್ನು ಪಡೆಯುತ್ತೇವೆ. ಅಂಥಾ ಕನಸಿನಲ್ಲಿ ಉಂಟಾದ ಜೀವ.

4. ಜೀವದ ಈ ಮೂರು ಬಗೆಯಲ್ಲಿ ಮೊದಲನೆಯದು ಮಾತ್ರ ಪಾರಮಾರ್ಥಿಕ ಎಂದರೆ ವಾಸ್ತವವಾಗಿರುವುದು ಪಾರಮಾರ್ಥಿಕ ಸತ್ತೆಯುಳ್ಳದ್ದು. ಇದು ಅವಚ್ಛಿನ್ನ ಅಥವಾ ಮಿತವಾದದ್ದು ಎಂದಾಗ ಇದರಲ್ಲಿ ಎರಡು ಅಂಶಗಳಿವೆ. ಒಂದು ವಿಶೇಷ್ಯವಾದ ಶುದ್ಧ ಚೈತನ್ಯ ಮತ್ತು ಎರಡನೆಯದು ವಿಶೇಷಣ ಅಥವಾ ಉಪಾಧಿಯಾದ ಅವಿದ್ಯಾ ಅಹಂಕಾರಗಳು. ಇವುಗಳಲ್ಲಿ ವಿಶೇಷಣ ಅಥವಾ ಉಪಾಧಿಯಾದ ಅಂಶವು ಬಾಧ್ಯ. ನಾಶವಾಗತಕ್ಕದ್ದು. ಆದರೆ ವಿಶೇಷ್ಯವಾದ ಶುದ್ಧ ಚೈತನ್ಯಕ್ಕೆ ಎಂದಿಗೂ ನಾಶವಾಗಲಿ ಬಾಧೆಯಾಗಲಿ ಇರುವುದಿಲ್ಲ. ಅದೇ ಪಾರಮಾರ್ಥಿಕವಾದದ್ದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅದರೂ ಅವಚ್ಛಿನ್ನವಾದ ಜೀವವು ಅವಚ್ಛೇದವಿಲ್ಲದ ಬ್ರಹ್ಮ ಹೇಗಾಗುವುದು ಎಂಬ ಸಂಶಯಕ್ಕೆ ಅದರ ಸ್ವರೂಪವನ್ನು ನಿರೂಪಿಸುವುದರ ಮೂಲಕ ಅದರ ಜೀವತ್ವವು ಆರೋಪಿತವಾದದ್ದು ಬ್ರಹ್ಮತ್ವವು ಸ್ವಭಾವ ಸಿದ್ಧವಾದದ್ದು ಎಂಬ ಸಮಾಧಾನವನ್ನು ಹೇಳುತ್ತಾರೆ.

ಅವಚ್ಛೇದಃ ಕಲ್ಪಿತಸ್ಸ್ಯಾದವಚ್ಛೇದ್ಯಂತು ವಾಸ್ತವಂ
ತಸ್ಮಿನ್ ಜೀವತ್ವಮಾರೋಪಾತ್ ಬ್ರಹ್ಮತ್ವಂತು ಸ್ವಭಾವತಃ ॥ ೩೩ ॥

ಅವಚ್ಛೇದಃ = ಅಂಶವಾಗಿರುವುದು (ತುಂಡಾಗಿರುವುದು) ; ಕಲ್ಪಿತಃ = ಮಾಡಿಕೊಂಡದ್ದು; ತು = ಆದರೆ ; ಅವಚ್ಛೇದ್ಯಂ = ಅದಕ್ಕೆ ಆಶ್ರಯವಾಗಿರುವ (ಅಂಶಿಯು) ; ವಾಸ್ತವಂ = ನಿಜವಾಗಿಯೇ, ಸಹಜವಾಗಿಯೇ, ಇರುವುದು ; ಸ್ಯಾತ್ = ಆಗುವದು. ತಸ್ಮಿನ್ = ಅದರಲ್ಲಿ. ಆ ಅದಿಷ್ಠಾನಭೂತವಾದ ಅಂಶಿಯಲ್ಲಿ ; ಆರೋಪಾತ್ = ಆರೋಪದಿಂದ, ತಪ್ಪುತಿಳಿವಳಿಕೆಯಿಂದ ; ಜೀವತ್ವಂ = ಜೀವತ್ವವು, ಬೇರೆ ಒಂದು ಎಂಬ ಭಾವನೆಯು (ಉಂಟಾಗಿರುವುದು); ತು = ಆದರೆ ; ಬ್ರಹ್ಮತ್ವಂ = ಬ್ರಹ್ಮಭಾವವು, ಬ್ರಹ್ಮವಾಗಿರುವುದು ; ಸ್ವಭಾವತಃ = ತಾನಾಗಿಯೇ ಇರುವ ಸ್ಥಿತಿ.

ಆದರೆ, ವಿಶಿಷ್ಟವಾದ ವ್ಯಕ್ತಿಯಲ್ಲಿ ವಿಶೇಷಣವಾಗಲೀ ವಿಶೇಷ್ಯವಾಗಲೀ ಯಾವ ಅಂಶವಿಲ್ಲದಿದ್ದರೂ ವಿಶಿಷ್ಟವೇ ಇಲ್ಲವಾಗುವುದು ಎಂಬ ನಿಯಮವಿದೆಯಲ್ಲ. ನೀಲೋತ್ಪಲದ ನೀಲತೆ ಇಲ್ಲದಿದ್ದರೂ ಅದು ನೀಲೋತ್ಪಲವಲ್ಲ, ಉತ್ಪಲತೆ ಇಲ್ಲದಿದ್ದರೂ ನೀಲೋತ್ಪಲವಲ್ಲ, ಇಲ್ಲಿ ಮಾತ್ರ ವಿಶೇಷಣಾಂಶ ನಾಶವಾದರೂ ವಿಶೇಷ್ಯಾಂಶ ಅಬಾಧಿತವಾಗಿರುತ್ತದೆ ಎನ್ನುವುದು ಹೇಗೆ ಎಂಬ ಸಂದೇಹ ಬರಬಹುದು.

ಮೇಲೆ ಹೇಳಿದ ನಿಯಮವು ಎರಡು ಅಂಶಗಳೂ ಸಮಾನಸತ್ತಾಕಗಳಾಗಿರುವಾಗ ಮಾತ್ರ ಅನ್ವಯಿಸುತ್ತದೆ. ನೀಲೋತ್ಪಲದಲ್ಲಿ ನೀಲತೆಯೂ ಉತ್ಪಲತೆಯೂ ಸಮಾನಸತ್ತಾಕಗಳು : ಎರಡರ ಸತ್ತೆಯೂ ವ್ಯಾವಹಾರಿಕವೇ. ಆದರೆ ಪ್ರಕೃತವಾದ ಅವಚ್ಛಿನ್ನ ಜೀವದಲ್ಲಿ ವಿಶೇಷಣ ಅಥವಾ ಉಪಾಧಿಯಾಗಿರುವ ಅವಿದ್ಯಾ ಅಹಂಕಾರಗಳು ನ್ಯೂನ ಸತ್ತಾಕಗಳು, ಅವುಗಳ ಸತ್ತಾ ವ್ಯಾವಹಾರಿಕ ; ಶುದ್ಧ ಚೈತನ್ಯವು ಪಾರಮಾರ್ಥಿಕ ಸತ್ತೆಯುಳ್ಳ ಅಧಿಕ ಸತ್ತಾಕವಾದದ್ದು, ಆದ್ದರಿಂದ ಇದರಲ್ಲಿ ಬಾಧಿತವಾಗುವುದು ಮಿಥ್ಯೆಯಾದ ಉಪಾಧಿ ಮಾತ್ರ. ಶುದ್ಧ ಚೈತನ್ಯವು ಅಬಾಧಿತವಾಗಿಯೇ ಇರುತ್ತದೆ. ಹೀಗಾಗಿ ಅವಚ್ಛಿನ್ನವಾದ ಜೀವವು ಪರಮಾರ್ಥವೆಂದರೆ ಅದರಲ್ಲಿ ವಿಶೇಷ್ಯಾಂಶವಾದ ಶುದ್ಧಚೈತನ್ಯವು (ನಿರುಪಾಧಿಕವಾಗಿ) ಪಾರಮಾರ್ಥಿಕ ಎಂದು ಅರ್ಥ.

CC-O. In Public Domain. Digitized by eGangotri

ಅಂಶವಾಗಿರುವುದು ಮಾಡಿಕೊಂಡ ಸ್ಥಿತಿ; ಆದರೆ ಅದಕ್ಕೆ ಅಧಿಷ್ಠಾನ್ನವಾದ ಅಂಶಿಯು ಸಹಜವಾಗಿಯೇ ಇರುವ ವಾಸ್ತವವು. ಆ ವಾಸ್ತವವಾದ ಅಂಶಿಯಲ್ಲಿ ತಪ್ಪು ತಿಳಿವಳಿಕೆಯಿಂದ ಅಂಶವಾದ ಜೀವತ್ವವು (indivduality) ತೋರುವುದು; ಆದರೆ ಬ್ರಹ್ಮತ್ವವು ಮಾತ್ರ ಅದಕ್ಕೆ ಸ್ವಾಭಾವಿಕವಾದದ್ದೇ ಆಗಿದೆ. ॥ ೩೩ ॥

ಅವಚ್ಛಿನ್ನಸ್ಯ ಜೀವಸ್ಯ ಪೂರ್ಣೇನ ಬ್ರಹ್ಮಣೈಕತಾಮ್
ತತ್ತ್ವಮಸ್ಯಾದಿವಾಕ್ಯಾನಿ ಜಗುರ್ನೇತರಜೀವಯೋಃ ॥ ೩೪ ॥

ಅವಚ್ಛಿನ್ನಸ್ಯ ಆವಚ್ಛಿನ್ನವಾಗಿ ತೋರುತ್ತಿರುವ; ಜೀವಸ್ಯ (ಪಾರಮಾರ್ಥಿಕ) ಜೀವದ; ಬ್ರಹ್ಮಣಾ ಬ್ರಹ್ಮದೊಂದಿಗೆ; ಏಕತಾಂ = ಏಕತ್ವವನ್ನು; ತತ್ತ್ವಮಸ್ಯಾದಿ ವಾಕ್ಯಾನಿ = 'ತತ್ತ್ವಮಸಿ' ಮುಂತಾದ ವಾಕ್ಯಗಳು; ಜಗುಃ = ಹೇಳುತ್ತಿವೆ. ಇತರ ಜೀವಯೋಃ = ಇನ್ನೆರಡು ಬಗೆಯ ಜೀವಗಳ; (ಏಕತಾಂ = ಐಕ್ಯವನ್ನು) ನ = ಅಲ್ಲ.

"ತತ್ತ್ವಮಸಿ" ಮುಂತಾದ ವಾಕ್ಯಗಳು ಹೇಳುತ್ತಿರುವುದು ಅವಚ್ಛಿನ್ನವಾಗಿ ತೋರುತ್ತಿರುವ ಪಾರಮಾರ್ಥಿಕ ಜೀವವೂ ಬ್ರಹ್ಮವೂ ಒಂದೇ ಎಂಬ ಐಕ್ಯವನ್ನು. ಚಿದಾಭಾಸ ಸ್ವಪ್ನಕಲ್ಪಿತ ಎಂಬ ಮತ್ತೆರಡು ಜೀವಗಳಿಗೆ ಬ್ರಹ್ಮದೊಡನೆ ಏಕತೆಯನ್ನು ಹೇಳಿಲ್ಲ. ॥ ೩೪ ॥

ಬ್ರಹ್ಮಣ್ಯವಸ್ಥಿತಾ ಮಾಯಾ ವಿಕ್ಷೇಪಾವೃತ್ತಿರೂಪಿಣೀ
ಅವೃತ್ಯಾಖಂಡತಾಂ ತಸ್ಮಿನ್ ಜಗಜ್ಜೀವೌ ಪ್ರಕಲ್ಪಯೇತ್ ॥ ೩೫ ॥

ಬ್ರಹ್ಮಣಿ ಬ್ರಹ್ಮದಲ್ಲಿ; ವಿಕ್ಷೇಪಾವೃತ್ತಿರೂಪಿಣೀ = ವಿಕ್ಷೇಪ ಆವರಣ ಶಕ್ತಿಗಳ ರೂಪದಲ್ಲಿ; ಅವಸ್ಥಿತಾ ಇರುವ; ಮಾಯಾ = ಮಾಯೆಯು; ತಸ್ಮಿನ್ = ಅದರಲ್ಲಿ (ಇರುವ); ಅಖಂಡತಾಂ = ಅಖಂಡತೆಯನ್ನು, ಭಾಗವಿಲ್ಲದಿರುವಿಕೆಯನ್ನು; ಅವೃತ್ಯ = ಮರೆಮಾಡಿ; ಜಗಜ್ಜೀವೌ = ಜಗತ್ತು ಜೀವಗಳನ್ನು; ಪ್ರಕಲ್ಪಯೇತ್ = ಉಂಟುಮಾಡುತ್ತದೆ.

CC-O. In Public Domain. Digitized by eGangotri

ಬ್ರಹ್ಮದಲ್ಲಿ[1] ಆವರಣ ವಿಕ್ಷೇಪಶಕ್ತಿಗಳ ರೂಪದಲ್ಲಿ ಇರುವ ಮಾಯೆಯು; ಬ್ರಹ್ಮಕ್ಕೆ ಸಹಜವಾದ ಅಖಂಡತೆಯನ್ನು (ಆವರಣ ಶಕ್ತಿಯಿಂದ) ಮರೆಮಾಡಿ, (ವಿಕ್ಷೇಪ ಶಕ್ತಿಯಿಂದ) ಜೀವ ಜಗತ್ತುಗಳು ತೋರುವಂತೆ ಮಾಡುತ್ತದೆ. (ಶ್ಲೋಕ ೧೩–೧೪ ನೋಡುವುದು). ॥ ೩೫ ॥

ಜೀವೋ ಧೀಸ್ಥ ಚಿದಾಭಾಸೋ ಭವೇದ್ಕ್ಕರ್ತಾ ಹಿ ಕರ್ಮಕೃತ್
ಭೋಗ್ಯರೂಪಮಿದಂ ಸರ್ವಂ ಜಗತ್ಸ್ಯಾದ್ಭೂತಭೌತಿಕಮ್ ॥ ೩೬ ॥

ಧೀಸ್ಥ ಚಿದಾಭಾಸಃ = ಬುದ್ಧಿಯಲ್ಲಿರುವ ಚೈತನ್ಯದ ತೋರಿಕೆಯಾದ; ಜೀವಃ = ಜೀವವು; ಕರ್ಮಕೃತ್ ಕರ್ಮಗಳನ್ನು ಮಾಡುವವನೂ; ಹಿ = ಮತ್ತು; ಭೋಕ್ತಾ ಅವುಗಳ ಫಲಗಳನ್ನು ಅನುಭವಿಸುವವನೂ; ಭವೇತ್ = ಆಗುತ್ತಾನೆ. ಭೂತಭೌತಿಕಂ = ಭೂತಗಳ ಮತ್ತು ಅವುಗಳಿಂದ ಉಂಟಾದ ಪದಾರ್ಥಗಳ ರೂಪವಾದ; ಇದಂ = ಈ; ಸರ್ವಂ ಜಗತ್ = ಎಲ್ಲ ಜಗತ್ತೂ; ಪ್ರಪಂಚವೂ; ಭೋಗ್ಯರೂಪಂ = ಅನುಭವಕ್ಕೆ ವಿಷಯವಾಗಿ; ಸ್ಯಾತ್ = = ಇರುವುದು.

ಕರ್ತೃತ್ವ ಭೋಕ್ತೃತ್ವಗಳು ಎಂದರೆ ಕರ್ಮಗಳನ್ನು ಮಾಡುವಿಕೆ ಮತ್ತು ಅದರ ಫಲವನ್ನು ಅನುಭವಿಸುವಿಕೆಗಳು ಬುದ್ಧಿಯಲ್ಲಿ ಚೈತನ್ಯದ ತೋರಿಕೆಯಾದ ವ್ಯಾವಹಾರಿಕ ಜೀವದ ಧರ್ಮಗಳು. ಪಂಚಭೂತಗಳೂ ಮತ್ತು ಅವುಗಳಿಂದ ಉಂಟಾದ ಪದಾರ್ಥಗಳ ರೂಪದಲ್ಲಿರುವ ಜಗತ್ತೆಲ್ಲವೂ ಭೋಗ್ಯರೂಪವಾಗಿ ಎಂದರೆ ಅನುಭವಕ್ಕೆ ವಿಷಯದ ರೂಪವಾಗಿ ಇರುವುದು. ॥ ೩೬ ॥

---

1. ಮಾಯೆಯು ಬ್ರಹ್ಮದಲ್ಲಿದೆಯೋ ಜೀವದಲ್ಲಿದೆಯೋ, ಎಂದರೆ, ಮಾಯೆಗೆ ಆಶ್ರಯವು ಬ್ರಹ್ಮವೋ ಜೀವವೋ ಎಂಬ ವಿಷಯದಲ್ಲಿ ಅದ್ವೈತಿಗಳಲ್ಲಿಯೇ ಅಭಿಪ್ರಾಯಭೇದವಿದೆ. ಎರಡು ಪಕ್ಷಗಳಿಗೂ ಯುಕ್ತಿಗಳೂ ಇವೆ. ಮಾಯೆಯು ಬ್ರಹ್ಮವನ್ನು ಕುರಿತದ್ದು, ಆದರ ವಿಷಯ ಬ್ರಹ್ಮ ಎನ್ನುವುದರಲ್ಲಿ ವಿವಾದವಿಲ್ಲ. ಬ್ರಹ್ಮವಿಷಯದಲ್ಲಿ ಜೀವಕ್ಕಿರುವ ಮಿತವಾದ ಜ್ಞಾನದ (ಅವಿದ್ಯೆಯ) ಕಾರಣವು ಮಾಯೆ ಎನ್ನುವಾಗ ಜೀವವನ್ನೇ ಮಾಯೆಗೆ ಆಶ್ರಯವೆನ್ನುವುದು ಹೆಚ್ಚು ಸಮಂಜಸವೆಂದು ಕಾಣುತ್ತದೆ. ಆದರೂ ಮಾಯೆಯ ಆಶ್ರಯವು ದುರ್ನಿರೂಪ್ಯ, ಅನಿರ್ವಚನೀಯ, ಎನ್ನುವುದೇ ಸರಿಯಾಗಬಹುದು.

CC-O. In Public Domain. Digitized by eGangotri

ಹೀಗೆ ಜೀವ ಜಗತ್ತುಗಳ ಸ್ವರೂಪವನ್ನು ಹೇಳಿ, ಈಗ ಇವು ಅನಿರ್ವಚನೀಯವಾದ ಮಾಯೆಯಿಂದ ಉಂಟಾದುವಾದ್ದರಿಂದ, ಮೋಕ್ಷ ದೆಶೆಯಲ್ಲಿ ಇರುವುದಿಲ್ಲ, ವ್ಯವಹಾರ ಕಾಲದಲ್ಲಿ ಮಾತ್ರ ಇರುತ್ತವೆ; ಆದ್ದರಿಂದ ಇವೆರಡೂ ವ್ಯಾವಹಾರಿಕವೆಂಬುದನ್ನು ಹೇಳುತ್ತಾರೆ.

ಅನಾದಿಕಾಲಮಾರಭ್ಯ ಮೋಕ್ಷಾತ್ಪೂರ್ವಮಿದಂ ದ್ವಯಮ್
ವ್ಯವಹಾರೇ ಸ್ಥಿತಂ ತಸ್ಮಾದುಭಯಂ ವ್ಯಾವಹಾರಿಕಮ್ ॥ ೩೭ ॥

ಅನಾದಿಕಾಲಂ ಆರಭ್ಯ = ಅನಾದಿಕಾಲದಿಂದ ಪ್ರಾರಂಭವಾಗಿ, ಮೋಕ್ಷಾತ್ಪೂರ್ವಂ = ಮೋಕ್ಷದ ವರೆಗೆ ; ಇದಂ ದ್ವಯಂ = ಜೀವ ಜಗತ್ತು ಎಂಬ ಈ ಎರಡೂ ; ವ್ಯವಹಾರೇ = ವ್ಯವಹಾರದಲ್ಲಿ ; ಸ್ಥಿತಂ = ಇವೆ. ತಸ್ಮಾತ್ = ಆದುದರಿಂದ ; ಉಭಯಂ = ಇವೆರಡೂ ; ವ್ಯಾವಹಾರಿಕಂ = ವ್ಯವಹಾರದಲ್ಲಿ ಇರತಕ್ಕವು ;

ಅನಾದಿಕಾಲದಿಂದ[1] ಮೋಕ್ಷವಾಗುವವರೆಗೆ ಜೀವ ಜಗತ್ತು ಎಂಬ ಎರಡೂ ವ್ಯವಹಾರದಲ್ಲಿವೆ. ಆದ್ದರಿಂದ ಇವೆರಡೂ ವ್ಯಾವಹಾರಿಕಗಳು ; ವ್ಯವಹಾರದಲ್ಲಿ ಇರತಕ್ಕವು. ಇವುಗಳ ಇರುವಿಕೆ ವ್ಯಾವಹಾರಿಕ ಸತ್ತಾ. ಮೋಕ್ಷದಲ್ಲಿ ಇವು ಇಲ್ಲವಾಗುವುದರಿಂದ ಇವು ಪಾರಮಾರ್ಥಿಕಗಳಲ್ಲ. ಪಾರಮಾರ್ಥಿಕವಾದದ್ದು ಯಾವಾಗಲೂ ಇದ್ದೇ ಇರುವುದು ; ಎಂದಿಗೂ ಇಲ್ಲವಾಗುವುದಿಲ್ಲ. ॥ ೩೭ ॥

ಚಿದಾಭಾಸಸ್ಥಿತಾ ನಿದ್ರಾ ವಿಕ್ಷೇಪಾವೃತ್ತಿರೂಪಿಣೀ
ಆವೃತ್ಯ ಜೀವಜಗತೀ ಪೂರ್ವೇ ನೂತ್ನೇತು ಕಲ್ಪಯೇತ್ ॥ ೩೮ ॥

---

1. ಇಲ್ಲಿ ಅನಾದಿ ಎಂದರೆ ಆದಿ ಇಲ್ಲದ್ದು ಎಂದು ಅರ್ಥವಲ್ಲ, ಯಾವಾಗ ಪ್ರಾರಂಭವಾಯಿತು ಎಂದು ಹೇಳಲು ಸಾಧ್ಯವಿಲ್ಲದ್ದು ಎಂದು ಅರ್ಥ. ಯಾವಾಗ ಎನ್ನುವ ಪ್ರಶ್ನೆ ಕಾಲಕ್ಕೆ ಸಂಬಂಧಪಟ್ಟದ್ದು. ಕಾಲವು ಭೇದಗ್ರಹಣರೂಪವಾದ ಅಜ್ಞಾನ ಅಥವಾ ಮಾಯೆಯಲ್ಲಿ ಸೇರಿರುವುದರಿಂದ, ಅಜ್ಞಾನ ಯಾವಾಗ ಪ್ರಾರಂಭವಾಯಿತು ಎಂಬ ಪ್ರಶ್ನೆಗೆ ಉತ್ತರ ಹೇಳುವುದು ಸಾಧ್ಯವಿಲ್ಲ. ಇದು ಮಾಯೆ ಅನಾದಿ ಎನ್ನುವುದರ ಅರ್ಥ.

CC-O. In Public Domain. Digitized by eGangotri

ವಿಕ್ಷೇಪಾವೃತ್ತಿರೂಪಿಣೀ = ಆವರಣ ವಿಕ್ಷೇಪಶಕ್ತಿಗಳ ರೂಪದಲ್ಲಿ; ಚಿದಾಭಾಸಸ್ಥಿತಾ = ಚಿದಾಭಾಸದಲ್ಲಿ ನೆಲೆಸಿರುವ, ಚಿದಾಭಾಸವನ್ನು ಆಶ್ರಯಿಸಿಕೊಂಡಿರುವ; ನಿದ್ರಾ = ನಿದ್ರೆಯು, ನಿದ್ದೆಯ ರೂಪವಾದ ಅಜ್ಞಾನವು; ಪೂರ್ವೇ = ಮುಂಚಿನ (ಜಾಗ್ರದವಸ್ಥೆಯ); ಜೀವಜಗತೀ = ಜೀವ ಜಗತ್ತುಗಳನ್ನು; ಆವೃತ್ಯ = ಮರೆಮಾಡಿ, ಕಾಣದಂತೆ ಮಾಡಿ; ನೂತ್ನೇ = ಹೊಸವನ್ನು, ಹೊಸ ಸ್ವಪ್ನದ ಜೀವಜಗತ್ತುಗಳನ್ನು; ಕಲ್ಪಯೇತ್ = ಉಂಟುಮಾಡುವುದು.

ಚಿದಾಭಾಸವನ್ನು ಆಶ್ರಯಿಸಿರುವ ನಿದ್ರಾರೂಪವಾದ ಅಜ್ಞಾನವೂ ಆವರಣ ವಿಕ್ಷೇಪ ಶಕ್ತಿಗಳುಳ್ಳದ್ದು. ಅದು ಎಚ್ಚರದ ಜೀವಜಗತ್ತುಗಳನ್ನು ಆವರಣ ಶಕ್ತಿಯಿಂದ ಮರೆಮಾಡಿ ವಿಕ್ಷೇಪ ಶಕ್ತಿಯಿಂದ ಕನಸಿನ ಜೀವಜಗತ್ತುಗಳನ್ನು ಉಂಟುಮಾಡುತ್ತದೆ. ॥ ೩೮ ॥

ಪ್ರತೀತಿಕಾಲ ಏವೈತೇ ಸ್ಥಿತತ್ವಾತ್ಪ್ರಾತಿಭಾಸಿಕೇ
ನಹಿ ಸ್ವಪ್ನಪ್ರಬುದ್ಧಸ್ಯ ಪುನ ಸ್ಸ್ವಪ್ನೇ ಸ್ಥಿತಿಸ್ತಯೋಃ ॥ ೩೯ ॥

ಪ್ರತೀತಿಕಾಲ ಏವ = (ಇವುಗಳ) ತಿಳಿವಳಿಕೆ ಇರುವ ಕಾಲದಲ್ಲಿ ಮಾತ್ರ; ಸ್ಥಿತತ್ವಾತ್ = ಇರುವುದರಿಂದ; ಏತೇ = ಇವೆರಡೂ, ಕನಸಿನ ಜೀವ ಜಗತ್ತುಗಳು; ಪ್ರಾತಿಭಾಸಿಕೇ = ಪ್ರಾತಿಭಾಸಿಕಗಳು. ಸ್ವಪ್ನ ಪ್ರಬುದ್ಧಸ್ಯ = ಕನಸು ಕಂಡು ಎದ್ದವನ; ಪುನಃ ಸ್ವಪ್ನೇ = ಮತ್ತೊಂದು ಕನಸಿನಲ್ಲಿ; ತಯೋಃ = ಅವುಗಳ; ಸ್ಥಿತಿಃ = ಇರುವಿಕೆಯು; ನ ಹಿ = ಇಲ್ಲವಷ್ಟೆ ?

ಕನಸಿನ ಜಗತ್ತು ಜೀವಗಳು ಅವುಗಳ ತಿಳಿವಳಿಕೆ ಇರುವಷ್ಟು ಕಾಲ ಮಾತ್ರ ಇರುತ್ತವೆ. ಆದುದರಿಂದ ಇವುಗಳು ಪ್ರಾತಿಭಾಸಿಕಗಳು (ಇವುಗಳ ಇರವೂ, ಸತ್ತೆಯೂ, ಪ್ರಾತಿಭಾಸಿಕ). ಕನಸು ಕಂಡು ಎದ್ದವನ ಮತ್ತೊಂದು ಕನಸಿನಲ್ಲಿ ಹಿಂದಿನ ಕನಸಿನ ಜಗತ್ತಾಗಲಿ ಅದರಲ್ಲಿ ಅನುಭವವನ್ನು ಪಡೆಯುತ್ತಿರುವೆನೆಂಬ ಅಭಿಮಾನ ಉಳ್ಳ ಆ ಕನಸಿನ ಜೀವವಾಗಲಿ ಇರುವುದಿಲ್ಲವೆಂಬುದು ಪ್ರಸಿದ್ಧವಾಗಿಯೇ ಇದೆ.

ಪ್ರಾತಿಭಾಸಿಕ ಜೀವೋ ಯಸ್ತ್ರಜ್ಜಗತ್ಪ್ರಾತಿಭಾಸಿಕಮ್
ವಾಸ್ತವಂ ಮನ್ಯತೇಽನ್ಯಸ್ತು ಮಿಥ್ಯೇತಿ ವ್ಯವಹಾರಿಕಃ ॥ ೪೦ ॥

CC-O. In Public Domain. Digitized by eGangotri

ಪ್ರಾತಿಭಾಸಿಕ ಜೀವಃ = ಪ್ರಾತಿಭಾಸಿಕ ಜೀವವು ; ಯಃ = ಯಾವುದೋ; ತತ್ = ಆ; ಪ್ರಾತಿಭಾಸಿಕಂ ಜಗತ್ = ಪ್ರಾತಿಭಾಸಿಕ ಜಗತ್ತನ್ನು ; ವಾಸ್ತವಂ = ನಿಜವೆಂದು ; ಮನ್ಯತೇ ತಿಳಿಯುತ್ತದೆ ; ತು = ಆದರೆ; ಅನ್ಯ = ಮತ್ತೊಂದಾದ ; ವ್ಯಾವಹಾರಿಕಃ = ವ್ಯಾವಹಾರಿಕ ಜೀವವು; ಮಿಥ್ಯಾ ಇತಿ = ಸುಳ್ಳೆಂದು; (ಮನ್ಯತೇ ತಿಳಿಯುತ್ತದೆ).

ಪ್ರಾತಿಭಾಸಿಕ ಜೀವವು ತನಗೆ ತಿಳಿಯುತ್ತಿರುವ ಪ್ರಾತಿಭಾಸಿಕ ಜಗತ್ತನ್ನೇ ಸತ್ಯವೆಂದು ತಿಳಿಯುತ್ತದೆ. ಆದರೆ ಮತ್ತೊಂದಾದ ವ್ಯಾವಹಾರಿಕ ಜೀವವು ಆ ಪ್ರಾತಿಭಾಸಿಕ ಜಗತ್ತನ್ನು 'ಮಿಥ್ಯಾ', ಸುಳ್ಳು, ಎಂದು ತಿಳಿಯುತ್ತದೆ. ॥ ೪೦ ॥

ವ್ಯಾವಹಾರಿಕಜೀವೋಯಸ್ತ್ವಜ್ಞಗದ್ವ್ಯಾವಹಾರಿಕಮ್
ಸತ್ಯಂ ಪ್ರತ್ಯೇತಿ ಮಿಥ್ಯೇತಿ ಮನ್ಯತೇ ಪಾರಮಾರ್ಥಿಕಃ ॥ ೪೧ ॥

ವ್ಯಾವಹಾರಿಕಜೀವಃ = ವ್ಯಾವಹಾರಿಕ ಜೀವವು ; ಯಃ = ಯಾವುದೋ; ತತ್ = ಅದು ; ವ್ಯಾವಹಾರಿಕಮ್ ಜಗತ್ = ವ್ಯಾವಹಾರಿಕ ಜಗತ್ತನ್ನು ; ಸತ್ಯಂ = ಸತ್ಯವೆಂದು ; ಪ್ರತ್ಯೇತಿ = ತಿಳಿಯುತ್ತದೆ. ಪಾರಮಾರ್ಥಿಕಃ = ಪಾರಮಾರ್ಥಿಕ ಜೀವವು ; (ಆ ವ್ಯಾವಹಾರಿಕ ಜಗತ್ತನ್ನೇ) ಮಿಥ್ಯಾಇತಿ = ಸುಳ್ಳೆಂದು ; ಮನ್ಯತೇ = ತಿಳಿಯುತ್ತದೆ.

ವ್ಯಾವಹಾರಿಕ ಜೀವವು ವ್ಯಾವಹಾರಿಕ ಜಗತ್ತನ್ನು ಸತ್ಯವೆಂದು ತಿಳಿಯುತ್ತದೆ. ಅದೇ ವ್ಯಾವಹಾರಿಕ ಜಗತ್ತನ್ನು ಪಾರಮಾರ್ಥಿಕ ಜೀವವು ಸುಳ್ಳೆಂದು ತಿಳಿಯುತ್ತದೆ. ॥ ೪೧ ॥

ಪಾರಮಾರ್ಥಿಕ ಜೀವಸ್ತು ಬ್ರಹ್ಮೈಕ್ಯಂ ಪಾರಮಾರ್ಥಿಕಮ್
ಪ್ರತ್ಯೇತಿ ವೀಕ್ಷ್ಯತೇ ನಾನ್ಯದ್ವೀಕ್ಷತೇ ತ್ವನೃತಾತ್ಮನಾ ॥ ೪೨ ॥

ಪಾರಮಾರ್ಥಿಕ ಜೀವಃ ತು = ಪಾರಮಾರ್ಥಿಕ ಜೀವವಾದರೋ ; ಪಾರಮಾರ್ಥಿಕಂ = ಪರಮಾರ್ಥಸತ್ಯವಾದ; ಬ್ರಹ್ಮೈಕ್ಯಂ = ಬ್ರಹ್ಮ ಒಂದೇ ಇರುವುದು ಎಂಬ ಬ್ರಹ್ಮದ ಏಕತೆಯನ್ನು ; ಪ್ರತ್ಯೇತಿ ಅರಿಯುತ್ತದೆ. (ಅದುದರಿಂದಲೇ) ಅನ್ಯತ್ = ಬೇರೆ ಯಾವುದೂ, ನ ವೀಕ್ಷ್ಯತೇ = ಕಾಣುವುದೇ ಇಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ತು ಆದರೆ, ಒಂದು ವೇಳೆ ಕಂಡದ್ದೇ ಆದರೆ ; ಅನೃತಾತ್ಮನಾ ಸುಳ್ಳಾಗಿಯೇ, ಇಲ್ಲದೆಯೇ, ತೋರುತ್ತದೆ ಎಂಬ ತಿಳಿವಳಿಕೆಯೊಡನೆಯೇ ; ವೀಕ್ಷತೇ = ನೋಡುತ್ತದೆ.

ಪಾರಮಾರ್ಥಿಕ ಜೀವವಾದರೋ ಬ್ರಹ್ಮ ಒಂದೇ ಇರುವುದು ಎಂಬ ಪರಮಾರ್ಥ ಸತ್ಯವನ್ನು ಅರಿತಿದೆ. ಆದುದರಿಂದಲೇ ಬೇರೆ ಯಾವುದೂ ಆದಕ್ಕೆ ಕಾಣುವುದೇ ಇಲ್ಲ. ಒಂದು ವೇಳೆ ಕಂಡದ್ದೇ ಆದರೆ ಅದು ಸುಳ್ಳಾಗಿಯೇ, ಇಲ್ಲದ್ದೇ ತೋರುತ್ತಿದೆ,ಎಂಬ ತಿಳಿವಳಿಕೆಯಿಂದ ಕೂಡಿಯೇ ಕಾಣುತ್ತದೆ. ॥೪೨॥

40–42, 32ನೆಯ ಶ್ಲೋಕದಲ್ಲಿ ಜೀವ ಮೂರು ಬಗೆಯಾಗಿದೆ ಎಂಬುದನ್ನು ಹೇಳತ್ತು. ಈ ಮೂರು ಬಗೆಯ ಜೀವದ ಇರುವಿಕೆ (ಸತೆ)ಯೂ ಮೂರು ಬಗೆಯಾದದ್ದು ಎಂಬುದನ್ನು ಆ ಸಂದರ್ಭದಲ್ಲಿಯೇ ಸ್ಪಷ್ಟಗೊಳಿಸಿತ್ತು. ಜೀವದ ಮುಖ್ಯ ಧರ್ಮ ಜ್ಞಾತೃತ್ವ ; ಅದು ಮುಖ್ಯವಾಗಿ ದೃಗ್ರೂಪವಾದದ್ದು. ಎಂದರೆ ಮೂರು ಬಗೆಯ ಜೀವಗಳಲ್ಲಿ ಪ್ರತಿಯೊಂದೂ ಸಮಸತ್ತಾಕವಾದ, ತನ್ನದಕ್ಕೆ ಸಮಾನವಾದ ಇರುವಿಕೆಯುಳ್ಳ, ಜಗತ್ತನ್ನು ಸತ್ಯವೆಂದೂ, ನ್ಯೂನ ಸತ್ತಾಕವಾದ, ಎಂದರೆ ತನ್ನದಕ್ಕಿಂತ ಕಡಮೆಯ ಬಗೆಯ ಇರುವಿಕೆಯುಳ್ಳ ವಿಷಯವನ್ನು ಮಿಥ್ಯೆಯೆಂದೂ ತಿಳಿಯುತ್ತದೆ. ಅಧಿಕ ಸತ್ತಾಕವಾದ, ತನ್ನದಕ್ಕಿಂತಲೂ ಹೆಚ್ಚಿನ ಮಟ್ಟದ ಇರುವಿಕೆಯುಳ್ಳ ವಿಷಯದ ಅರಿವು ಆದಕ್ಕೆ ಇರುವುದೇ ಇಲ್ಲ.

ಹೀಗೆ ಪ್ರಾತಿಭಾಸಿಕ ಸತ್ತೆಯುಳ್ಳ ಕನಸಿನ ಜೀವಕ್ಕೆ, ಆ ಕನಸಿನ ಜಗತ್ತು ಮಾತ್ರವೇ ವಿಷಯವಾಗಿದೆ. ಅದನ್ನೇ ಅದು ಸತ್ಯವೆಂದು ಭಾವಿಸುತ್ತದೆ. ಮತ್ತೊಂದು ಕನಸಿನಲ್ಲಿ ಆ ಜೀವವೂ ಇಲ್ಲ ಆ ಜಗತ್ತೂ ಇಲ್ಲ.

ಚಿದಾಭಾಸ ರೂಪವಾದ ಎಚ್ಚರದ ವ್ಯಾವಹಾರಿಕ ಜೀವಕ್ಕೆ ವ್ಯಾವಹಾರಿಕ ಜಗತ್ತು ಅನುಭವ ವಿಷಯವಾಗಿದೆ. ಅದನ್ನೇ ಅದು ಸತ್ಯವೆಂದು ಭಾವಿಸುತ್ತದೆ. ಕನಸಿನ ಜಗತ್ತು ಎಚ್ಚರದಲ್ಲಿ ಇಲ್ಲ; ಆದರೂ ಎಚ್ಚರದ ಜೀವಕ್ಕೆ ಸ್ಮೃತಿಯ, ನೆನಪಿನ, ವಿಷಯವಾಗಿದೆ. ಆ ಜಗತ್ತನ್ನು ಈ ಜೀವವು ಮಿಥ್ಯೆ ಎಂದು ತಿಳಿಯುತ್ತದೆ.

ಹಾಗೆಯೇ ಸಾಕ್ಷಿ ಸ್ವರೂಪವಾದ ಪಾರಮಾರ್ಥಿಕ ಜೀವವು ಬ್ರಹ್ಮಸ್ವರೂಪವಾಗಿಯೇ ಇದೆ. ಇರುವುದು ಅದೊಂದೇ. ಆದ್ದರಿಂದ ಅದಕ್ಕೆ ಯಾವುದೂ

CC-O. In Public Domain. Digitized by eGangotri

ಕಾಣುತ್ತಿಲ್ಲ. ಅದು ದೃಶ್ಯರಹಿತವಾದ ಕೇವಲ ದೃಗ್ರೂಪವಾಗಿಯೇ ಇದೆ. ಬ್ರಹ್ಮ ಒಂದೇ ಎಂಬ ಪರಮಾರ್ಥ ಸತ್ಯವನ್ನು ಅದು ಅರಿತಿದೆ ಎನ್ನುವುದರ ಅರ್ಥ ಇದೇ. ಒಂದು ವೇಳೆ ಅದಕ್ಕೆ ಏನಾದರೂ ಕಂಡರೂ ಕೂಡ ಇಲ್ಲದ್ದೇ ಕಾಣುತ್ತಿದೆ ಎಂಬ ತಿಳಿವಳಿಕೆಯೊಡನೆಯೇ, ಬಾಧಿತಪ್ರತ್ಯಯವಾಗಿಯೇ, ಸುಳ್ಳಾಗಿಯೇ ಕಾಣುತ್ತಿದೆ.

ಹೀಗೆ ಪ್ರಾತಿಭಾಸಿಕ ಜೀವ ಜಗತ್ತುಗಳ ದೃಷ್ಟಾಂತದಿಂದ ವ್ಯಾವಹಾರಿಕ ಜೀವ ಜಗತ್ತುಗಳೂ ಮಿಥ್ಯೆ, ಸುಳ್ಳು, ಎಂಬುದನ್ನು ದೃಢಪಡಿಸಿದ್ದಾಯಿತು. ಈಗ ದೃಷ್ಟಾಂತವಾಗಿದ್ದ ಜೀವ ಜಗತ್ತುಗಳು ಅವಕ್ಕೆ ಅಧಿಷ್ಠಾನವಾದ ಚಿದಾಭಾಸದಿಂದ ಬೇರೆಯಲ್ಲ, ಚಿದಾಭಾಸವಾಗಿಯೇ ಉಳಿಯುತ್ತವೆ ಎಂಬ ತಿಳಿದಿರುವ ವಿಷಯವನ್ನೇ ಹೊರಗಿನ ದೃಷ್ಟಾಂತದಿಂದ ದೃಢಪಡಿಸುತ್ತಾರೆ. ಮುಂದಕ್ಕೆ ಹೊರಗಿನ ಒಳಗಿನ ಎರಡು ದೃಷ್ಟಾಂತಗಳಿಂದ ಈ ಎರಡು ಜೀವ ಜಗತ್ತುಗಳೂ ಸಾಕ್ಷಿಯಿಂದ ಬೇರೆಯಲ್ಲ, ಅವುಗಳ ಬಾಧ್ಯಾಂಶ ಹೋದಮೇಲೆ ಕೇವಲ ಸಾಕ್ಷಿಯಾಗಿಯೇ, ಚಿನ್ಮಾತ್ರವಾಗಿಯೇ, ಉಳಿಯುತ್ತವೆ ಎಂಬುದನ್ನು ತೋರಿಸುತ್ತಾರೆ.

ಮಾಧುರ್ಯದ್ರವ ಶೈತ್ಯಾನಿ ನೀರಧರ್ಮಾಸ್ತರಂಗಕೇ
ಅನುಗವ್ಯಾಥ ತಿಷ್ಠಂತೇ ಫೇನೇಽಪ್ಯನುಗತಾ ಯಥಾ ॥ ೪೩ ॥

ಯಥಾ = ಯಾವ ರೀತಿಯಲ್ಲಿ, ಹೇಗೆ; ನೀರಧರ್ಮಾಃ = ನೀರಿನ ಗುಣಗಳಾದ; ಮಾಧುರ್ಯ ದ್ರವಶೈತ್ಯಾನಿ = ಸಿಹಿ, ಹರಿಯುವುದು, ತಂಪು, ಇವುಗಳು; ಅನುಗವ್ಯ = ಅನುಸರಿಸಿ ಬಂದು; ತರಂಗಕೇ = (ನೀರಿನಿಂದ ಉಂಟಾದ) ಅಲೆಯಲ್ಲಿ; ಅಥ = ಅಲ್ಲಿಂದ; ಅನುಗತಾ = ಅನುಸರಿಸಿ; ಫೇನೇ ಅಪಿ = ನೊರೆಯಲ್ಲಿಯೂ ಕೂಡ; ತಿಷ್ಠತೇ = ಇರುತ್ತವೆಯೊ;

ನೀರಿನ ಧರ್ಮ(ಗುಣ)ಗಳಾದ ಸಿಹಿ, ಹರಿಯುವುದು, ತಂಪು, ಇವುಗಳು ನೀರಿನಿಂದುಂಟಾದ ಅಲೆಯಲ್ಲಿಯೂ ಮತ್ತು ಅಲೆಯಿಂದ ಉಂಟಾದ ನೊರೆಯಲ್ಲಿಯೂ ಕೂಡ ಹೇಗೆ ಅನುಸರಿಸಿ ಸೇರಿಕೊಂಡಿರುತ್ತವೆಯೋ; ॥ ೪೩ ॥

ಸಾಕ್ಷಿಸ್ಥಾಃ ಸಚ್ಚಿದಾನಂದಾಃ ಸಂಬಂಧಾದ್ವ್ಯವಹಾರಿಕೇ
ತದ್ವಾ ದ್ವೈಣಾನುಗಚ್ಛಂತಿ ತಥೈವ ಪ್ರಾತಿಭಾಸಿಕೇ ॥ ೪೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ತಥಾ ಏವ = ಹಾಗೆಯೇ ; ಸಾಕ್ಷಿಸ್ಥಾಃ = ಸಾಕ್ಷಿಯಲ್ಲಿರುವ ; ಸಚ್ಚಿದಾನಂದಾಃ = ಸತ್ ಚಿತ್ ಆನಂದಗಳು; ಸಂಬಂಧಾತ್ = ಸಂಬಂಧದಿಂದ; ವ್ಯಾವಹಾರಿಕೇ = ವ್ಯಾವಹಾರಿಕ ಜೀವವಾದ ಚಿದಾಭಾಸದಲ್ಲೂ ; ತದ್ದ್ವಾರೇಣ = ಅದರ ಮೂಲಕ; ಪ್ರಾತಿಭಾಸಿಕೇ = ಪ್ರಾತಿಭಾಸಿಕವಾದ ಸ್ವಪ್ನಜೀವದಲ್ಲೂ; ಅನುಗಚ್ಛನ್ತಿ = ಅನುಸರಿಸಿಕೊಂಡಿರುತ್ತವೆ.

ಹಾಗೆಯೇ ಸಾಕ್ಷಿಯ ಸ್ವರೂಪ ಲಕ್ಷಣಗಳಾದ ಸತ್ ಚಿತ್ ಆನಂದಗಳು ಅದರ ಸಂಬಂಧದಿಂದ ವ್ಯಾವಹಾರಿಕ ಜೀವವಾದ ಚಿದಾಭಾಸದಲ್ಲೂ ಅದರ ಮೂಲಕ ಅದಕ್ಕೆ ಸಂಬಂಧಪಟ್ಟ ಪ್ರಾತಿಭಾಸಿಕವಾದ ಸ್ವಪ್ನ ಜೀವದಲ್ಲೂ ಇದ್ದೇ ಇರುತ್ತವೆ.

43-44. ನೀರು ಅಲೆ ನೊರೆ, ಇವನ್ನು ದೃಷ್ಟಾಂತವಾಗಿ ಕೊಟ್ಟಿದೆ; ಈ ಮೂರರಲ್ಲಿ ನೀರಿನ ಇರುವಿಕೆ (ವ್ಯವಹಾರದಲ್ಲಿ ಸತ್ಯವಾದದ್ದು. ಸ್ವಾಭಾವಿಕವಾಗಿ ನಿಶ್ಚಲವಾಗಿರುವ ಒಂದು ದೊಡ್ಡ ಜಲಾಶಯವನ್ನು ಚಿಂತಿಸೋಣ. ಎಲ್ಲೆಲ್ಲಿ ನೋಡಿದರೂ ನೀರೇನೀರಾಗಿ ನಿಶ್ಚಲವಾಗಿದೆ. ಗಾಳಿ ಎದ್ದಾಗ ಆ ಉಪಾಧಿ (Condition) ಯಿಂದ ಚಲಿಸುತ್ತಿರುವಾಗ ಅವುಗಳ ಮೇಲೆ ನೊರೆಯೂ ಇರುತ್ತದೆ. ಅಲೆ ಮತ್ತು ನೊರೆಗಳಲ್ಲಿರುವುದೂ, ಜಲಾಶಯದಲ್ಲಿರುವುದೂ ಎಲ್ಲವೂ ನೀರೇ ಆದರೂ ಅವುಗಳ ರೂಪಾದಿಗಳಲ್ಲಿ ಭೇದ ಕಾಣುತ್ತದೆ. ಜಲಾಶಯದ ನೀರು ಅಖಂಡವಾಗಿ ಒಂದೇ ಆಗಿದೆ. ಅದರಲ್ಲಿ ಸಹಜವಾಗಿ ಯಾವ ಚಲನವೂ ಇಲ್ಲ. ಅಲೆಗಳು ಅನೇಕವಾಗಿ ಚಲನಶೀಲವಾಗಿವೆ. ಹಾಗೆಯೇ ನೊರೆಯೂ ಒಂದೊಂದು ಅಲೆಯ ಮೇಲೂ ಬೇರೆ ಬೇರೆಯಾಗಿಯೇ ಇದೆ.

ನೀರಿನ ಸತ್ತೆ, ಇರುವಿಕೆ, ವ್ಯವಹಾರದಲ್ಲಿ ಸತ್ಯವಾದದ್ದು ಎಂದು ಹೇಳಿತ್ತು. ಅಲೆಯ ಇರುವಿಕೆ ಇದಕ್ಕಿಂತಲೂ ಕಡಿಮೆ ಮಟ್ಟದ್ದು. ಅಲೆಯು ನೀರಿನಲ್ಲಿಯೆ ನೀರಿನಿಂದಲೇ ಉಂಟಾಗಿ, ನೀರಿನ ಮೇಲೆಯೇ ಇದ್ದು, ನೀರಲ್ಲೇ ಅಡಗುತ್ತದೆ. ಆದ್ದರಿಂದ ನೀರಿನ ಸತ್ತೆ ಅಧಿಕವಾದದ್ದು. ಅಲೆಯ ಇರುವಿಕೆ ಅದಕ್ಕಿಂತ ಕಡಿಮೆಯ ಮಟ್ಟದ್ದು. ಅಲೆಯು ನೀರಿಗಿಂತ ನ್ಯೂನ ಸತ್ತಾತ್ಮಕವಾದದ್ದು. ಹಾಗೆಯೇ ನೊರೆಯ ಇರುವಿಕೆ ಅಲೆಯ ಇರುವಿಕೆಗಿಂತಲೂ ಕಡಿಮೆಯ ಮಟ್ಟದ್ದು, ನೊರೆಯು ಅಲೆಗಿಂತ ನ್ಯೂನ ಸತ್ತಾತ್ಮಕವಾದದ್ದು.

CC-O. In Public Domain. Digitized by eGangotri

ಹೀಗಿದ್ದರೂ ಈ ಮೂರು ರೂಪದಲ್ಲಿರುವುದೂ ನೀರೇ. ಅದು ಒಂದೇ ರೀತಿಯ ಗಿದೆ, ಅದರ ಇರುವಿಕೆಯೂ ಒಂದೇ ರೀತಿಯಾಗಿ ಸಮವಾಗಿಯೇ ಇದೆ. ಸತ್ತಾ ವಿಷಯತೆ ಇರುವುದು ರೂಪಾಂತರದಲ್ಲಿ, ರೂಪಾಂತರದಿಂದ. ಆದರೂ ನೀರಿನ ಸ್ವರೂಪಲಕ್ಷಣಗಳಾದ ಸಿಹಿ, ದ್ರವತ್ವ, ತಂಪುಗಳು ಮೂರು ರೂಪಗಳಲ್ಲಿಯೂ ಅನುಸ್ಯೂತವಾಗಿ ಇದ್ದೇ ಇವೆ. ಇವುಗಳಲ್ಲಿ ಯಾವ ಹೆಚ್ಚು ಕಡಿಮೆಯೂ ಇಲ್ಲ. ಇದಿಷ್ಟೂ ದೃಷ್ಟಾಂತ.

ಇದನ್ನು ಪ್ರಕೃತವಾದ ವಿಚಾರಕ್ಕೆ ಹೊಂದಿಸಿಕೊಂಡರೆ :

ನೀರಿನಂತೆ ಇರುವುದೇ ಬ್ರಹ್ಮ, ಶುದ್ಧ ಚೈತನ್ಯ, ಸಾಕ್ಷಿ. ಅದು ಅನಂತ, ಅಖಂಡ, ಒಂದೇ, ಎರಡನೆಯದು ಯಾವುದೂ ಇಲ್ಲ. ವ್ಯಾವಹಾರಿಕ ಜೀವ ಜಗತ್ತುಗಳೂ, ಪ್ರಾತಿಭಾಸಿಕ ಜೀವಜಗತ್ತುಗಳೂ, ಆದರಲ್ಲಿಯೇ ಮಾಯೆಯಿಂದ ಉಂಟಾಗಿ ಅದರಲ್ಲಿಯೇ ಇದ್ದು ಅದರಲ್ಲಿಯೇ ಅಡಗುತ್ತವೆ. ಬ್ರಹ್ಮದ ಇರುವಿಕೆಯೇ ಸತ್ಯವಾದದ್ದು, ಪರಮಾರ್ಥವಾದದ್ದು. ಅದಕ್ಕೆ ಯಾವ ಮಿತಿಯೂ ಇಲ್ಲ. ವ್ಯಾವಹಾರಿಕ ಜೀವ ಜಗತ್ತು ಮಾಯೆ ಇರುವವರೆಗೂ ಇದ್ದು ಮಾಯೆ ಇಲ್ಲವಾದಾಗ ತಾವೂ ಅಡಗಿಹೋಗುತ್ತವೆ. ಇವುಗಳ ಇರುವಿಕೆಯೂ ವ್ಯಾವಹಾರಿಕವೇ. ಶುದ್ಧ ಚೈತನ್ಯದ ಇರುವಿಕೆಗಿಂತಲೂ ನ್ಯೂನವಾದದ್ದು, ಕಡಿಮೆಯ ಮಟ್ಟದ್ದು. ನೊರೆಯಂತಿರುವ ಪ್ರಾತಿಭಾಸಿಕ ಜೀವ ಜಗತ್ತುಗಳೂ ತಾವಿರುವಷ್ಟು ಕಾಲ ಮಾತ್ರ ಇದ್ದು ವ್ಯವಹಾರ ಕಾಲದಲ್ಲಿಯೇ ಅಡಗಿ ಹೋಗುತ್ತವೆ. ಇವುಗಳ ಇರುವಿಕೆ ಮತ್ತೂ ಕಡಿಮೆ ಮಟ್ಟದ್ದು. ಹೀಗೆ ವಿಕೃತಿ (product) ಗಳಾದ ವ್ಯಾವಹಾರಿಕ ಪ್ರಾತಿಭಾಸಿಕ ಜೀವಜಗತ್ತುಗಳಲ್ಲಿ ನಾನಾತ್ವವೂ ತಾರತಮ್ಯವೂ ಇದ್ದರೂ ಪರಮಾರ್ಥವಾದ ಬ್ರಹ್ಮದಲ್ಲಿ ಇವು ಯಾವುದೂ ಇಲ್ಲ. ಮತ್ತು ಅದರ ಸ್ವರೂಪ ಲಕ್ಷಣಗಳಾದ ಸತ್ ಚಿತ್ ಆನಂದಗಳು ಅದರ ಸಂಬಂಧದಿಂದ ವ್ಯಾವಹಾರಿಕ ಜೀವಜಗತ್ತುಗಳಲ್ಲಿಯೂ ಅವುಗಳ ಮೂಲಕ ಪ್ರಾತಿಭಾಸಿಕ ಜೀವಜಗತ್ತುಗಳಲ್ಲಿಯೂ ಅನುಸ್ಯೂತವಾಗಿ ಇದ್ದೇ ಇರುತ್ತವೆ.

॥ ೪೪ ॥

ಲಯೇ ಫೇನಸ್ಯ ತದ್ವರ್ಮಾ ದ್ರವಾದ್ಯಾ ಸ್ಸ್ಯ ಸ್ತರಂಗಕೇ
ತಸ್ಯಾಪಿ ವಿಲಯೇ ನೀರೇ ತಿಷ್ಠಂತ್ಯೇತೇ ಯಥಾ ಪುರಾ ॥ ೪೫ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಫೇನಸ್ಯ = ನೊರೆಯ; ಲಯೇ = ಅಡಗುವಿಕೆಯಾದಾಗ; ತದ್ಧರ್ಮಾಃ = ಅದರ ಧರ್ಮಗಳಾಗಿ (ತೋರುತ್ತಿ)ದ್ದ; ದ್ರವಾದ್ಯಾಃ = ದ್ರವತ್ವ, ಹರಿಯುವುದು, ಮುಂತಾದುವು; ತರಂಗಕೇ = ಅಲೆಯಲ್ಲಿ; ಸ್ಯುಃ = ಇರುವುವು. ತಸ್ಯ ಅಪಿ = ಅದರದ್ದೂ, ಅಲೆಯದೂ; ವಿಲಯೇ = ಅಡಗುವಿಕೆಯಾದಾಗ; ಯಥಾ ಪುರಾ = ಮೊದಲಿದ್ದಂತೆ; ನೀರೇ = ನೀರಿನಲ್ಲಿ; ಏತೇ = ಇವು, ಈ ಧರ್ಮಗಳು; ತಿಷ್ಠಂತಿ = ಇರುತ್ತವೆ.

ನೊರೆಯು ಅಲೆಯಲ್ಲಿ ಅಡಗಿದಾಗ ಅದರ ಸ್ವರೂಪಲಕ್ಷಣ (ಧರ್ಮ) ವಾದ ದ್ರವತ್ವವೇ ಮುಂತಾದುವು ಅದರ ಅಧಿಷ್ಠಾನವಾದ ಅಲೆಯಲ್ಲಿ ಸೇರಿ ಕೊಳ್ಳುತ್ತವೆ. ಆ ಅಲೆಯೂ ಅಡಗಿದಾಗ ಮೊದಲಿನಂತೆ ಅದಕ್ಕೂ ಅಧಿಷ್ಠಾನವಾದ ನೀರಿನಲ್ಲಿಯೇ ಇರುತ್ತವೆ. ॥ ೪೫ ॥

ಪ್ರಾತಿಭಾಸಿಕ ಜೀವಸ್ಯ ಲಯೇ ಸ್ಯುರ್ವ್ಯಾವಹಾರಿಕೇ
ತಲ್ಲಯೇ ಸಚ್ಚಿದಾನಂದಾಃ ಪರ್ಯವಸ್ಯಂತಿ ಸಾಕ್ಷಿಣಿ ॥ ೪೬ ॥

ಪ್ರಾತಿಭಾಸಿಕ ಜೀವಸ್ಯ = ಪ್ರಾತಿಭಾಸಿಕ ಜೀವದ; ಲಯೇ = ಲಯವಾದಾಗ; ಸಚ್ಚಿದಾನಂದಾಃ = ಸಚ್ಚಿದಾನಂದಗಳು; ವ್ಯಾವಹಾರಿಕೇ = ವ್ಯಾವಹಾರಿಕ ಜೀವನದಲ್ಲಿ; ಸ್ಯುಃ = ಇರುವುವು; ತಲ್ಲಯೇ = ಅದೂ ಅಡಗಿದಾಗ; ಸಾಕ್ಷಿಣಿ = ಸಾಕ್ಷಿಯಲ್ಲಿ; ಪರ್ಯವಸ್ಯಂತಿ = ಕೊನೆಗಾಣುವುವು.

ಪ್ರಾತಿಭಾಸಿಕ ಜೀವನದಲ್ಲಿ ಕಾಣುತ್ತಿದ್ದ ಸಚ್ಚಿದಾನಂದಗಳು ಆ ಜೀವವು ತನಗೆ ಅಧಿಷ್ಠಾನವಾದ ವ್ಯಾವಹಾರಿಕ ಜೀವನದಲ್ಲಿ ಅಡಗಿದಾಗ, ಅವೂ ವ್ಯಾವಹಾರಿಕ ಜೀವನದಲ್ಲಿ ಇರುವುವು. ಅದು ತನಗೆ ಅಧಿಷ್ಠಾನವಾದ ಸಾಕ್ಷಿಯಲ್ಲಿ ಅಡಗಿದಾಗ ಅವು ಅದೇ ಸಾಕ್ಷಿಯಲ್ಲಿ ಅದರ ಸ್ವರೂಪವಾಗಿಯೇ ಕೊನೆಗಾಣುವುವು. ॥ ೪೬ ॥

ನಮಗೆ ಆಗುತ್ತಿರುವ ಅನುಭವವೆಲ್ಲವೂ ಭೇದಗ್ರಹಣಪೂರ್ವಕವಾಗಿಯೇ ಇದೆ. ಎಲ್ಲ ಭೇದಕ್ಕೂ ಮೂಲಭೂತವಾದದ್ದು ವಿಷಯಿ ವಿಷಯಗಳ, ದ್ರಷ್ಟೃ ದೃಶ್ಯಗಳ ಭೇದ, ದ್ರಷ್ಟೃವಿನ ಸ್ವರೂಪವೇ ದೃಕ್. ಮೂಲಭೂತವಾದ ಈ ದೃಗ್‌ದೃಶ್ಯಗಳ ಭೇದವನ್ನೇ ಸೂಕ್ಷ್ಮವಾಗಿಯೂ ಆಳವಾಗಿಯೂ ವಿಚಾರಮಾಡಿ. ವಾಸ್ತವವಾಗಿ ಇರುವುದು ದೃಕ್ ಒಂದೇ; ಅದೇ ಸಾಕ್ಷಿ, ಅದೇ ಬ್ರಹ್ಮ.

CC-O. In Public Domain. Digitized by eGangotri

ದೃಶ್ಯವೆಲ್ಲವೂ ಅದರಲ್ಲಿಯೇ ಎದ್ದು, ಅದರಲ್ಲಿಯೇ ಇದ್ದು ಅದರಲ್ಲಿಯೇ ಅಡಗುತ್ತದೆ; ಇರುವವರೆಗೆ ಮಾತ್ರ ಬೇರೆಯಾಗಿ ತೋರುತ್ತದೆ ಅಷ್ಟೇ, ಬೇರೆಯಾಗಿ ಇರುವದಿಲ್ಲ; ಇಂಥ ದೃಕ್‌ನ ಸ್ವರೂಪವಾದ ಸಚ್ಚಿದಾನಂದಗಳು ದೃಶ್ಯಗಳಲ್ಲಿಯೂ ಧರ್ಮಗಳಾಗಿ ಕಂಡು ದೃಶ್ಯಗಳೊಡನೆಯೇ ತಾವೂ ದೃಕ್‌ನಲ್ಲಿ ಅಡಗಿ ಹೋಗುತ್ತವೆ; ಮಿಕ್ಕಿರುವುದು ಮೊದಲೂ ಯಾವಾಗಲೂ ಇದ್ದ ದೃಗ್ರೂಪವಾದ, ಸಾಕ್ಷಿ ಚೈತನ್ಯವಾದ, ಬ್ರಹ್ಮ ಒಂದೇ ಎಂಬುದು ಈ ಪ್ರಕರಣದ ತಾತ್ಪರ್ಯ.

ಓಂ ತತ್ಸತ್

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

ಆಶ್ರಮದ ಇತರ ಕೆಲವು ಪ್ರಕಟಣೆಗಳು

CC-O. In Public Domain. Digitized by eGangotri

ಬ್ರಹ್ಮಸೂತ್ರಗಳು (ಭಾಷ್ಯತ್ರಯ ಸಂಗ್ರಹದೊಂದಿಗೆ)	75-00
ಶ್ರೀಮದ್ಭಗವದ್ಗೀತಾ (ಸಟೀಕ)	20-00
ಉಪದೇಶಸಾಹಸ್ರೀ (ಶ್ರೀ ಶಂಕರಾಚಾರ್ಯರು)	25-00
ಜೀವನ್ಮುಕ್ತಿವಿವೇಕ (ಶ್ರೀ ವಿದ್ಯಾರಣ್ಯರ ಕೃತಿ)	18-00
ಪಂಚದಶೀ (ಶ್ರೀ ವಿದ್ಯಾರಣ್ಯರ ಕೃತಿ)	25-00
ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ (ಮಾನಸೋಲ್ಲಾಸ, ಕನ್ನಡ ಅನುವಾದ ಸಹಿತ)	8-00
ಸನತ್ಸುಜಾತೀಯ (ಮಹಾಭಾರತದಲ್ಲಿ ಸನತ್ಕುಮಾರರು ಧೃತರಾಷ್ಟ್ರನಿಗೆ ಮಾಡಿದ ಉಪದೇಶ)	8-00
ಅವಧೂತಗೀತಾ	3-00
ಅಷ್ಟಾವಕ್ರಗೀತಾ	4-50
ವಿವೇಕ ಚೂಡಾಮಣಿ (ಶ್ರೀ ಶಂಕರಾಚಾರ್ಯರು)	15-00
ಆತ್ಮಬೋಧ ಅಪರೋಕ್ಷಾನುಭೂತಿ, ವಾಕ್ಯವೃತ್ತಿ, ಲಘುವಾಕ್ಯವೃತ್ತಿ (ಶ್ರೀ ಶಂಕರಾಚಾರ್ಯರು)	7-50
ವೇದಾಂತಸಾರ	10-00
ಶಿವಾನಂದಲಹರೀ (ಶ್ರೀ ಶಂಕರಾಚಾರ್ಯರು)	2-00
ಸೌಂದರ್ಯಲಹರೀ (ಶ್ರೀ ಶಂಕರಾಚಾರ್ಯರು)	4-50
ಶ್ರೀ ಲಲಿತಾಸಹಸ್ರನಾಮ ಮತ್ತು ತ್ರಿಶತೀ (ಭಾಷ್ಯಸಹಿತ)	25-00
ಶ್ರೀ ಲಲಿತಾತ್ರಿಶತೀನಾಮಸ್ತೋತ್ರಮ್ (ಅರ್ಥಸಹಿತ)	8-00
ಶ್ರೀ ವಿಷ್ಣುಸಹಸ್ರನಾಮ (ಭಾಷ್ಯ)	9-00
ಉಪನಿಷತ್ ಭಾವಧಾರೆ (ಮೂಲ, ತಾತ್ಪರ್ಯ ಮತ್ತು ದೀರ್ಘ ವಿವರಣೆ ಸಹಿತ)	38-00
ಗೀತಾಭಾವಧಾರೆ (ಮೂಲ, ತಾತ್ಪರ್ಯ ಮತ್ತು ದೀರ್ಘ ವಿವರಣೆ ಸಹಿತ)	50-00
ಸ್ತವಕುಸುಮಾಂಜಲಿ (ಸ್ತೋತ್ರ ಸಂಕಲನ, ಅರ್ಥ ಸಹಿತ)	15-00
ವೇದಕುಸುಮಾಂಜಲಿ (ಸೂಕ್ತಗಳು, ರುದ್ರ, ಚಮಕ, ಮಂತ್ರಪುಷ್ಪ ಇತ್ಯಾದಿ)	7-50
ಶ್ರೀ ದುರ್ಗಾಸಪ್ತಶತೀ (ಅಥವಾ ದೇವೀ ಮಾಹಾತ್ಮ್ಯಮ್)	15-00

Sri Vidyaranya Math Books, Collection 2020